# ಕರ್ನಾಟಕ ವಿಧಾನಸಭೆ

**ಹದಿನೈದನೇ ವಿಧಾನಸಭೆ**

**(ನಾಲ್ಕನೇ ಅಧಿವೇಶನ)**

**ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ**

## 24ನೇ ಜುಲೈ 2019

----

**[ನಗರಾಭಿವೃದ್ಧಿ ಸಚಿವರು - ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು - ಗೃಹ ಸಚಿವರು - ವಸತಿ ಸಚಿವರು - ಉಪ ಮುಖ್ಯಮಂತ್ರಿಗಳು - ಲೋಕೋಪಯೋಗಿ ಸಚಿವರುಹಾಗೂ ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು ].**

**ಒಟ್ಟು ಪ್ರಶ್ನೆಗಳು - 97**

----

15/4/1159

**ಅನಧಿಕೃತ ಕಟ್ಟಡಗಳು**

**1066 ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಿಂದ 31.01.2019 ರವರೆಗೆ ಬೆಳಗಾವಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿವಿಧ ವಾರ್ಡ್ / ಪ್ರದೇಶಗಳಲ್ಲಿ ಅನಧಿಕೃತವಾಗಿ ಕಟ್ಟಡಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪಾಲಿಕೆ ವ್ಯಾಪ್ತಿಯ ಬೆಳಗಾವಿ ದಕ್ಷಿಣ ಮತ ಕ್ಷೇತ್ರದಲ್ಲಿ ಹರಿಯುವ ನಾಲೆಗಳ ಬಫರ್ ಝೋನ್ ಪ್ರದೇಶಗಳಲ್ಲಿ ಅಂಗಡಿ ಮುಂಗಟ್ಟು, ವಾಣಿಜ್ಯ ಮಳಿಗೆ, ವಸತಿ ಸಮುಚ್ಚಯ, ವಸತಿ ಕಟ್ಟಡಗಳನ್ನು ನಿರ್ಮಿಸಲು ಅವಕಾಶವಿದೆಯೇ: (ವಿವರ ನೀಡುವುದು)

ಇ) ಇಲ್ಲವಾದಲ್ಲಿ ಬೆಳಗಾವಿ ನಗರದಲ್ಲಿರುವ ಬಳ್ಳಾರಿ ನಾಗಝರಿ ನಾಲೆಗಳ ಬಫರ್ ಝೋನ್ ನಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಅವುಗಳ ಸರ್ವೆ ನಂಬರ್/.ಸಿ.ಟಿ.ಎಸ್. ನಂಬರ್.ವಿಸ್ತೀರ್ಣ ಕಟ್ಟಡ ಮಾಲೀಕರು ಯಾರು; ಅತಿಕ್ರಮ ಮಾಡಿದ ವಿಸ್ತೀರ್ಣವೆಷ್ಟು, ಈ ರೀತಿ ಅತಿಕ್ರಮಣ ಮಾಡಿದವರ ವಿರುದ್ಧ ಹಾಗೂ ಅದಕ್ಕೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? (ನಾಲಾವಾರು ಹಾಗೂ ಸರ್ವೆ/ಸಿ.ಟಿ.ಎಸ್ ನಂಬರ್‌ವಾರು ಪೂರ್ಣ ಮಾಹಿತಿ ನೀಡುವುದು)

----

15/4/1160

## ರಕ್ಕಸಕೊಪ್ಪ ಜಲಾಶಯ

1067 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ನಗರಕ್ಕೆ ನೀರು ಸರಬರಾಜು ಮಾಡುವ ರಕ್ಕಸಕೊಪ್ಪ ಜಲಾಶಯದ ಎತ್ತರವನ್ನು ಹೆಚ್ಚಿಸಿ ಮಳೆಗಾಲದಲ್ಲಿ ಅನಾವಶ್ಯಕವಾಗಿ ಪೋಲಾಗಿ ಹೋಗುತ್ತಿರುವ ನೀರನ್ನು ತಡೆದು ಇನ್ನಷ್ಟು ಉಪಯೋಗಕ್ಕೆ ಬಳಸಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಈ ಕುರಿತು ಸ್ಥಳೀಯ ಶಾಸಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಯಾರು ಸಲ್ಲಿಸಿದ್ದಾರೆ, ಅದರ ಬಗ್ಗೆ ಕೈಗೊಂಡಿರುವ ಮತ್ತು ಕೈಗೊಳ್ಳುವ ಕ್ರಮ ಗಳೇನು;
ಆ) ಬೆಳಗಾವಿ ನಗರದಲ್ಲಿ 24x7 ಕುಡಿಯುವ ನೀರಿನ ಸೌಲಭ್ಯ ಇರುವ /ಇಲ್ಲದಿರುವ ವಾರ್ಡ್ ಗಳ ಸಂಖ್ಯೆ ಎಷ್ಟು ; (ಇದರಲ್ಲಿ ಒಳಗೊಂಡಿರುವ ಪ್ರದೇಶಗಳ ವಿವರಗಳನ್ನು ಪ್ರತ್ಯೇಕವಾಗಿ ಮತ ಕ್ಷೇತ್ರವಾರು ನೀಡುವುದು)
ಇ) ಪ್ರಸ್ತುತ 24x7 ಕುಡಿಯುವ ನೀರಿನ ಯೋಜನೆಯ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಯ ಅಂದಾಜು ಮೊತ್ತವೆಷ್ಟು; ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆಯೇ; ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು;
ಈ) ಅಮೃತ್ ಯೋಜನೆಯಡಿಯಲ್ಲಿ ಬೆಳಗಾವಿ ನಗರದಲ್ಲಿ ಎಷ್ಟುಕಿ.ಮೀ. ಗಳಷ್ಟು ಒಳಚರಂಡಿ ಕಾಮಗಾರಿಗಳನ್ನು ಎಷ್ಟು ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗುತ್ತದೆ;
ಉ) ಅಮೃತ್ ಯೋಜನೆಯಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಕಾಮಗಾರಿಗಳನ್ನು ಮಾಡಿದ್ದು ಪೂರ್ಣಗೊಳ್ಳದೇ ಇರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಯಾವಾಗ ಪೂರ್ತಿಗೊಳಿಸಲಾಗುವುದು; (ವಿವರ ನೀಡುವುದು)

----

15/4/1161

## ಜಿ+3 ಮಾದರಿಯ ಕಟ್ಟಡಗಳ ನಿರ್ಮಾಣ

1068 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ (ದಕ್ಷಿಣ) ಮತಕ್ಷೇತ್ರದ ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದಿನಾಂಕ:01.01.2016 ರಿಂದ 30.06.2019ರ ಅವಧಿಯಲ್ಲಿ ಜಿ+3 ಹಾಗೂ ಅದಕ್ಕಿಂತಲೂ ಹೆಚ್ಚಿನ ಮಹಡಿ ಕಟ್ಟಡಗಳ ನಿರ್ಮಾಣಕ್ಕಾಗಿ ಪರವಾನಿಗೆ ಬಂದ ಮನವಿಗಳು ಎಷ್ಟು; (ಅವುಗಳಲ್ಲಿ ತಿರಸ್ಕರಿಸಿ ಹಾಗೂ ಪರವಾನಿಗೆ ನೀಡಿದವರ ಸರ್ವೆ/ಸಿಟಿಎಸ್, ವಿಸ್ತೀರ್ಣ, ಭೂ ಉಪಯೋಗ, ಮಾಲೀಕರ ಹೆಸರುಗಳು ಮುಂತಾದ ಸಂಪೂರ್ಣ ವಿವರ ನೀಡುವುದು)
ಆ) ಜಿ+3 ಹಾಗೂ ಹೆಚ್ಚಿನ ಮಹಡಿ ಕಟ್ಟಡಗಳ ಪರವಾನಿಗೆ ನೀಡುವಾಗ ಪಾಲಿಕೆಯು ವಿಧಿಸಿದ ನಿಯಮಗಳು/ ಎಷ್ಟು ಮಹಡಿಗೆ ಪರವಾನಿಗೆ ನೀಡಿದೆ; ಮಾಲೀಕರು ಕಟ್ಟಿದ ಮಹಡಿಗಳ ಸಂಖ್ಯೆ ಎಷ್ಟು; ನಿರ್ಮಾಣದಲ್ಲಿ ನಿಯಮಗಳ ಉಲ್ಲಂಘನೆಯಾಗಿದೆಯೇ; (ಉಲ್ಲಂಘನೆಯಾಗಿರುವ ಕಟ್ಟಡಗಳ ಪೂರ್ಣ ವಿವರಗಳನ್ನು

ನೀಡುವುದು)
ಇ) ನಿರ್ಮಾಣಕ್ಕೆ ಪಾಲಿಕೆಯಿಂದ ಪರವಾನಿಗೆ ಪಡೆದ ವಿಸ್ತೀರ್ಣ ಎಷ್ಟು; (ಪರವಾನಿಗೆಯ ದಿನಾಂಕ, ಮುಕ್ತಾಯ ಪ್ರಮಾಣ ಪತ್ರವನ್ನು ನೀಡಿದ ದಿನಾಂಕ ಹಾಗೂ ಅಂತಿಮವಾಗಿ ಕಟ್ಟಿರುವ ವಿಸ್ತೀರ್ಣ ಕಟ್ಟಡವಾರು ಮಾಹಿತಿ ನೀಡುವುದು)
ಈ) ಕಟ್ಟಡಗಳ ನಿರ್ಮಾಣದ ಸ್ಥಳಕ್ಕೆ ಕಾರ್ಯದ ಆರಂಭದಿಂದಮುಕ್ತಾಯದವರೆಗೆ ಪಾಲಿಕೆಯ ಅಧಿಕಾರಿಗಳು ವಿವಿಧ ಹಂತಗಳಲ್ಲಿ ಪರಿಶೀಲನೆ ಮಾಡುವ ಅವಶ್ಯಕತೆ ಇದೆಯೇ; ಇದ್ದಲ್ಲಿ, ಯಾವ ಅಧಿಕಾರಿಯು ಎಷ್ಟು ಬಾರಿ, ಯಾವ ಯಾವ ಕಟ್ಟಡ ಕಾಮಗಾರಿಗಳನ್ನು ಪರಿಶೀಲನೆ ಮಾಡಿದ್ದಾರೆ? (ಕಟ್ಟಡಗಳ ವಿವರ ಹಾಗೂ ಕಟ್ಟಡವಾರು ಭೇಟಿ ನೀಡಿದ ಮಾಹಿತಿ ನೀಡುವುದು)

----

15/4/1162

**ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ**

1069 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) "ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ" ಅಡಿಯಲ್ಲಿ ಬೆಳಗಾವಿ ನಗರದ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಶಾಸಕರೇನಾದರೂ ಮನವಿ ಮಾಡಿದ್ದಾರೆಯೇ;
ಆ) ಮಾಡಿದ್ದಲ್ಲಿ, ಯಾರು, ಯಾವಾಗ ಎಷ್ಟು ಅನುದಾನದ ಬಿಡುಗಡೆಗಾಗಿ ಸಲ್ಲಿಸಿದ್ದಾರೆ; ಪ್ರಸ್ತುತ ಯಾವ ಹಂತದಲ್ಲಿ ಬಾಕಿ ಇರುತ್ತದೆ; (ವಿವರ ನೀಡುವುದು)
ಇ) 201819 ಹಾಗೂ 201920ನೇ ಸಾಲಿಗೆ ಬೆಳಗಾವಿ ನಗರದ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸದೇ ಇರಲು ಕಾರಣವೇನು;
ಈ) ಸರ್ಕಾರದಲ್ಲಿ ಅನುದಾನದ ಕೊರತೆ ಇದೆಯೇ; ಇಲ್ಲವಾದಲ್ಲಿ, ಕಳೆದ ಆಯವ್ಯಯದಲ್ಲಿ ಘೋಷಣೆಯಾಗಿರುವಂತೆ ಈವರೆಗೂ ಬೆಳಗಾವಿ ನಗರದ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸದಿರಲು ಕಾರಣವೇನು; ಸಂವಹನದ ಕೊರತೆಯೋ ಅಥವಾ ಅಧಿಕಾರಿಗಳ ನಿರ್ಲಕ್ಷ್ಯತನವೇ? (ವಿವರ ನೀಡುವುದು)

----

15/4/1163

**ಕಟ್ಟಡಗಳ ತೆರವು**

1070 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಪಣಜಿ ಹೆದ್ದಾರಿಗೆ ಹೊಂದಿಕೊಂಡಂತೆ ಸಿಟಿಎಸ್ ನಂಬರ್: 732 ರ ಯಾವ ಪ್ಲಾಟ್ ನಂಬರ್‌ನ ಎಷ್ಟು ಅಳತೆಯಲ್ಲಿ "ನೇಟಿವ್" ಎಂಬ ವಸತಿ ಗೃಹವನ್ನು ನಿರ್ಮಿಸಲಾಗಿದೆ;
ಆ) ಮುಕ್ತಾಯ ಪ್ರಮಾಣಪತ್ರ ನೀಡಿದ ಮೇಲೆ ಈ ಕಟ್ಟಡದಲ್ಲಿ ಪರವಾನಿಗೆ ಪ್ರಕಾರ ಲಿಫ್ಟ್ ಜಾಗಗಳು, ಪಾರ್ಕಿಂಗ್ ಜಾಗವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡಿರುವುದು, ಮುಂತಾದ ಬಹಳಷ್ಟು ಬದಲಾವಣೆಯನ್ನು ಮಾಡಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ;
ಇ) ಬಂದಿದ್ದಲ್ಲಿ, ಸಂಬಂಧಪಟ್ಟವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಇಲ್ಲವಾದಲ್ಲಿ ಯಾವಾಗ ಕೈಗೊಳ್ಳಲಾಗುವುದು;

ಈ) ಸಿಟಿಎಸ್ ನಂಬರ್: 5516, 5517, 5485 ಗಳಲ್ಲಿ ನಿರ್ಮಿಸಲಾದ ಕಟ್ಟಡವು ಪಾಲಿಕೆಯು ನೀಡಿರುವ ಪರವಾನಿಗೆಯಂತಿರದೇ ಬೇರೆ ರೀತಿಯಲ್ಲಿ ನಿರ್ಮಿಸಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಾಲಿಕೆ ಕೈಗೊಂಡಿರುವ ಕ್ರಮವೇನು;

ಉ) ಈ ಕಟ್ಟಡದ ನಿರ್ಮಾಣ ಹಾಗೂ ಮುಕ್ತಾಯ ಪ್ರಮಾಣ ಪತ್ರವನ್ನು ಯಾರು ಮತ್ತು ಯಾವಾಗ ನೀಡಿದ್ದಾರೆ; ಅಗ್ನಿಶಾಮಕ ಇಲಾಖೆಯವರು ಯಾವಾಗ ಮತ್ತು ಎಷ್ಟು ಬಾರಿ ನಿರಾಕ್ಷೇಪಣೆ ಪತ್ರವನ್ನು ನೀಡಿದ್ದಾರೆ; (ವಿವರನೀಡುವುದು)

ಊ) ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ, ಅದನ್ನು ತೆರವುಗೊಳಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಋ) ಹಾಗಿದ್ದಲ್ಲಿ, ಯಾವಾಗ ಯಾವ ಕ್ರಮವನ್ನು ಕೈಗೊಳ್ಳಲಾಗುವುದು? (ವಿವರ ನೀಡುವುದು)

----

**15/4/1426**

## ಕಾಮಗಾರಿಗಳಿಗೆ ಅನುದಾನ

**1071 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೊಪ್ಪಳ ಜಿಲ್ಲೆಯ, ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ 201819 ಮತ್ತು 201920ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾಗಿರುವ ಕಾಮಗಾರಿಗಳಾವುವು;

ಆ) ಈ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಮೊತ್ತವೆಷ್ಟು; ಖರ್ಚಾದ ಮೊತ್ತವೆಷ್ಟು; ಬಾಕಿ ಉಳಿದ ಅನುದಾನವೆಷ್ಟು (ಕಾಮಗಾರಿವಾರು ಮಾಹಿತಿ ನೀಡುವುದು)?

----

**15/4/1427**

## ಸಿಬ್ಬಂದಿಗಳ ವೇತನ

**1072 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದ ಪಟ್ಟಣ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ವಾಟರ್‌ಮ್ಯಾನ್, ಕಂಪ್ಯೂಟರ್ ಆಪರೇಟರ್ ಹಾಗೂ ಕರವಸೂಲಿಗಾರರ ಸೇವೆಯನ್ನು ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿದ ಮುಂದುವರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಲಾಗಿದೆ (ವಿವರ ನೀಡುವುದು)?

----

**15/4/1428**

## ಪೊಲೀಸ್ ಔಟ್ ಪೋಸ್ಟ್ ಸ್ಥಾಪನೆ

**1073 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿ ಪೊಲೀಸ್ ಔಟ್ ಪೋಸ್ಟ್ ಸ್ಥಾಪಿಸಲು ಇರುವ ಮಾನದಂಡಗಳೇನು;
ಆ) ಕೊಪ್ಪಳ ಜಿಲ್ಲೆಯಲ್ಲಿ ಪೊಲೀಸ್ ಔಟ್ ಪೋಸ್ಟ್ ಸ್ಥಾಪಿಸುವ ಬೇಡಿಕೆ ಸರ್ಕಾರದ ಮುಂದಿದೆಯೇ;
ಇ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಅಪಘಾತಕ್ಕೀಡಾದಾಗ ತುರ್ತು ಸಂದರ್ಭದಲ್ಲಿ ಸ್ಪಂದಿಸಲು ಪೊಲೀಸ್ ಔಟ್ ಪೋಸ್ಟ್‌ಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಪೊಲೀಸ್ ಔಟ್ ಪೋಸ್ಟನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು?

----

15/4/1429

**ವಸತಿ ಸೌಕರ್ಯ**

**1074 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) 201718ನೇ ಸಾಲಿಗೆ ದೇವರಾಜು ಅರಸು ವಸತಿ ಯೋಜನೆಯಡಿ ಒದಗಿಸಿರುವ ವಸತಿ ವಕಾರ್ಯಗಾರಗಳು ಎಷ್ಟು;
ಆ) ಸದರಿ ಯೋಜನೆಯಡಿ ಈವರೆಗೂ ಫಲಾನುಭವಿಗಳಿಗೆ ವಸತಿ ವಕಾಂು|ರ್ಂುಾಗಾರ ನಿರ್ಮಾಣಕ್ಕಾಗಿ ಕಾರ್ಯದೇಶ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)?

----

15/4/1452

**ವಸತಿ ಯೋಜನೆಗಳು**

**1075 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕೊಪ್ಪಳ ಜಿಲ್ಲೆ, ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ 201718 ರಿಂದ 201920ನೇ ಸಾಲಿನವರೆಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು;
ಆ) ಈ ಮನೆಗಳ ನಿರ್ಮಾಣಕ್ಕೆ ನಿಗಧಿಪಡಿಸಿರುವ, ಬಿಡುಗಡೆಯಾದ ಹಾಗೂ ಖರ್ಚಾದ ಮೊತ್ತವೆಷ್ಟು; (ವಾರ್ಷವಾರು ಮಾಹಿತಿ ಒದಗಿಸುವುದು)
ಇ) 2019ರ ಜೂನ್ 30ರ ಅಂತ್ಯದವರೆಗೆ ಪೂರ್ಣಗೊಳಿಸಿದ (ಕಟ್ಟಿದ) ಮನೆಗಳ ಸಂಖ್ಯೆ ಎಷ್ಟು; ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ ಎಷ್ಟು;
ಈ) ಮಂಜೂರಾದ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;
ಉ) ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

----

15/4/810

## ನಿವೇಶನ ಹಂಚಿಕೆ

**1076 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಎರಡು ವರ್ಷಗಳಲ್ಲಿ ಯಾವ ಯಾವ ಸ್ಥಳದಲ್ಲಿ ಎಷ್ಟು ನಿವೇಶನ ಹಂಚಿಕೆ ಮಾಡಲಾಗಿದೆ; (ಹೆಸರು ಸಮೇತ ಮಾಹಿತಿ ಒದಗಿಸುವುದು)
ಆ) ಪ್ರಸ್ತುತ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಇ) ಹಾಗಿದ್ದಲ್ಲಿ, ನಿವೇಶನ ಪಡೆಯಲು ಸರ್ಕಾರದ ಮಾನದಂಡಗಳಾವುವು;
ಈ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವ ಯಾವ ಸ್ಥಳದಲ್ಲಿ ಖಾಲಿ ನಿವೇಶನಗಳು ಲಭ್ಯ ಇರುತ್ತವೆ (ಸಂಪೂರ್ಣ ವಿವರ ನೀಡುವುದು)?

----

15/4/811

## ವಸತಿ ಯೋಜನೆಗಳು

**1077 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಲ್ಲಿ ಬೆಳಗಾವಿ ಉತ್ತರ ಮತ ಕ್ಷೇತ್ರದಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ;
ಆ) 2019-20ನೇ ಸಾಲಿನಲ್ಲಿ ಬೆಳಗಾವಿ ಉತ್ತರ ಮತ ಕ್ಷೇತ್ರಕ್ಕೆ ಎಷ್ಟು ಮನೆಗಳನ್ನು ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ (ವಿವರ ನೀಡುವುದು)?

----

15/4/812

## ಕಾಲೋನಿಗಳ ಅಭಿವೃದ್ಧಿ

**1078 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 2 ವರ್ಷಗಳಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಯಾವ ಯಾವ ವಿಧಾನಸಭಾ ಕ್ಷೇತ್ರಗಳಿಗೆ ಎಷ್ಟು ಅನುದಾನ ನೀಡಲಾಗಿದೆ;
ಆ) ಬೆಳಗಾವಿ ಉತ್ತರ ಮತ ಕ್ಷೇತ್ರಕ್ಕೆ ಕಳೆದ 3 ವರ್ಷಗಳಲ್ಲಿ ಎಷ್ಟು ಅನುದಾನ ನೀಡಲಾಗಿದೆ; (ಯೋಜನೆವಾರು ವಿವರ ನೀಡುವುದು)
ಇ) 2019-20ನೇ ಸಾಲಿನಲ್ಲಿ ಅಲ್ಪ ಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಬೇಡಿಕೆ ಬಂದಿರುವುದು ನಿಜವೇ;
ಈ) ಹಾಗಿದ್ದಲ್ಲಿ, ಸದರಿ ಬೇಡಿಕೆ ಬಗ್ಗೆ ಸರ್ಕಾರದ ಕ್ರಮವೇನು (ವಿವರ ನೀಡುವುದು)?

----

15/4/813

**ವಸತಿ ಸಮುಚ್ಚಯ**

1079 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬೆಳಗಾವಿ ನಗರದಲ್ಲಿ ಕಳೆದ 3 ವರ್ಷಗಳಿಂದ ಗೃಹ ಮಂಡಳಿಯಿಂದ ಎಷ್ಟು ವಸತಿ ಸಮುಚ್ಚಯ ನಿರ್ಮಿಸಲಾಗಿದೆ;
ಆ) ಅವುಗಳಲ್ಲಿ ಎಷ್ಟು ಮನೆಗಳನ್ನು ಇಲ್ಲಿಯವರೆಗೆ ವಿತರಿಸಲಾಗಿದೆ; (ಫಲಾನುಭವಿಗಳ ಹೆಸರು ನೀಡುವುದು)
ಇ) ಬೆಳಗಾವಿ ಉತ್ತರ ಮತ ಕ್ಷೇತ್ರದಲ್ಲಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಗೃಹ ಮಂಡಳಿಯಿಂದ ವಸತಿ ಸಮುಚ್ಚಯ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

----

15/4/829

**ಪ್ರತಿಮೆ ನಿರ್ಮಾಣ**

1080 **ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಷ್ಟ್ರಪತಿಯವರಿಂದ ವೀರ್ ತಾ ಮೆಡಲ್ ಪಡೆದಿದ್ದ ಕೊಡಗಿನ ಯೋಧ ಶ್ರೀ ಗುರು ಪ್ರಸಾದ್‌ರವರು ದಿನಾಂಕ:19/11/2008ರಂದು ನಕ್ಸಲ್ ಕಾರ್ಯಾಚರಣೆಯಲ್ಲಿ ಮೃತಪಟ್ಟಿದ್ದು, ಇವರ ಸ್ವಂತ ಸ್ಥಳ ಭಾಗಮಂಡಲದಲ್ಲಿ ಪ್ರತಿಮೆಯನ್ನು ನಿರ್ಮಿಸಲು ಈ ಹಿಂದೆ ಆದೇಶವಾಗಿದ್ದರೂ ಸಹ ಈವರೆವಿಗೂ ಪ್ರತಿಮೆ ನಿರ್ಮಾಣ ಮಾಡದಿರಲು ಕಾರಣವೇನು;
ಆ) ಹಾಗಿದಲ್ಲಿ, ವಿಳಂಬಕ್ಕೆ ಕಾರಣವೇನು, ಯಾವಾಗ ನಿರ್ಮಾಣ ಮಾಡಲಾಗುತ್ತದೆ? (ಸಂಪೂರ್ಣ ವಿವರ ನೀಡುವುದು)

----

15/4/830

**ವಸತಿ ಯೋಜನೆಗಳು**

1081 **ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬಸವ ವಾಜಪೇಯಿ ಅಂಬೇಡ್ಕರ್ ಹಾಗೂ ಇನ್ನಿತರ ವಸತಿ ಯೋಜನೆಗಳಲ್ಲಿ ಎಷ್ಟು ಮನೆಗಳು ಮಂಜೂರಾಗಿರುತ್ತವೆ;
ಆ)ಈ ಪೈಕಿ ಎಷ್ಟು ಮನೆಗಳು ಪೂರ್ಣಗೊಂಡಿವೆ; ಪೂರ್ಣಗೊಳ್ಳಲು ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು; ಪೂರ್ಣಗೊಳ್ಳದಿರಲು ಕಾರಣವೇನು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಇ) ವಸತಿ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು ಬ್ಲಾಕ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಿಂದ ಎಷ್ಟು ಮನೆಗಳು ಬ್ಲಾಕ್ ಆಗಿದೆ; ಇದಕ್ಕೆ ಕಾರಣವೇನು; ಬ್ಲಾಕ್ ಆದ ಮನೆಯನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; (ಕ್ಷೇತ್ರವಾರು ಪೂರ್ಣ ವಿವರ ನೀಡುವುದು)

ಈ) ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಜಲ ಪ್ರಳಯ ಉಂಟಾಗಿದ್ದು, ಇಲ್ಲಿನ ಹಳೆಯ ಮನೆಗಳು ಬಿರುಕು ಬಿಟ್ಟಿದ್ದು ವಾಸಕ್ಕೆ ಯೋಗ್ಯವಾಗದೇ ಇದ್ದು, ಪೂರ್ಣ ಪ್ರಮಾಣದ ಮನೆ ಕಳೆದುಕೊಂಡವರಿಗೆ ಮಾತ್ರ ಸರ್ಕಾರದಿಂದ ಹೊಸದಾಗಿ ಮನೆ ಕಟ್ಟಿಕೊಡುತ್ತಿದ್ದು ಉಳಿದವರಿಗೆ ಪರಿಹಾರ ನೀಡಿರುವುದರಿಂದ ರೈತರಿಗೆ ತುಂಬಾತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಜಿಲ್ಲೆಗೆ ಕನಿಷ್ಠ 500 ಮನೆಗಳು ಅವಶ್ಯವಿದ್ದು ಸದರಿ ಮನೆಗಳನ್ನು ಶಾಸಕರೇ ಹಂಚಿಕೆ ಮಾಡಲು ಕ್ರಮ ವಹಿಸುವ ಬಗ್ಗೆ ಸರ್ಕಾರದ ನಿಲುವೇನು;

ಊ) ವಿಶೇಷ ರೀತಿಯಲ್ಲಿ ಹೆಚ್ಚುವರಿ ಮನೆ ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ಪೂರ್ಣ ವಿವರ ನೀಡುವುದು)

----

**15/4/833**

**ಕೊಳಚೆ ಪ್ರದೇಶಗಳು**

**1082 ಅರವಿಂದ ಚಂದ್ರಕಾಂತ ಬೆಲ್ಲದ್ (ಹುಬ್ಬಳ್ಳಿ-ಧಾರವಾಡ ಪಶ್ಚಿಮ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿರುವ ಪಾಲಿಕೆಗಳಿಗೆ ಒಳಪಟ್ಟಿರುವ ಕೊಳಚೆ ಪ್ರದೇಶಗಳ ಒಟ್ಟು ಸಂಖ್ಯೆ ಎಷ್ಟು;

ಆ) ಅಧಿಕೃತವಾಗಿ ಘೋಷಣೆಯಾಗಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; ಘೋಷಣೆಯಾಗದಿರುವ ಕೊಳಚೆ ಪ್ರದೇಶಗಳನ್ನು ಅಧಿಕೃತವಾಗಿ ಘೋಷಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಇ) ಅಧಿಕೃತ ಘೋಷಣೆಯಾಗಿರುವ ಎಷ್ಟು ಕೊಳಚೆ ಪ್ರದೇಶಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ;

ಈ) ಅಧಿಕೃತವಾಗಿ ಘೋಷಣೆಯಾಗಿದ್ದರೂ ಹಲವು ಕೊಳಚೆ ಪ್ರದೇಶಗಳಿಗೆ ಹಕ್ಕುಪತ್ರಗಳನ್ನು ನೀಡದಿರಲು ಕಾರಣಗಳೇನು (ಸಂಪೂರ್ಣ ಮಾಹಿತಿ ನೀಡುವುದು)?

----

**15/4/838**

**ಘನತ್ಯಾಜ್ಯ ವರ್ಗಾವಣೆ**

**1083 ಡಾ|| ಅಶ್ವಥ್ ನಾರಾಯಣ್ ಸಿ.ಎನ್. (ಮಲ್ಲೇಶ್ವರಂ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2ನೇ ಹಂತದ ಘನತ್ಯಾಜ್ಯ ವರ್ಗಾವಣೆ ಕೇದ್ರದ ಟೆಂಡರ್ ಯಾವಾಗ ಕರೆಯಲಾಗಿದೆ; (ಟೆಂಡರ್ ಅಧಿಸೂಚನೆಯೊಂದಿಗೆ ಟೆಂಡರ್ ನಿಬಂಧನೆಗಳೊಳಗೊಂಡಂತೆ ಮಾಹಿತಿ ನೀಡುವುದು)

ಆ) ಟೆಂಡರ್ ನಿಯಮಗಳ ಉಲ್ಲಂಘನೆ ಮಾಡಿ ಟಿ.ಪಿ.ಎಸ್. ಸಂಸ್ಥೆಗೆ ಗುತ್ತಿಗೆ ನೀಡಿರುವ ಬಗ್ಗೆ ದೂರುಗಳು ಬಂದಿರುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸರ್ಕಾರಿ ಆದೇಶದ ಪ್ರತಿಯೊಂದಿಗೆ ಮಾಹಿತಿ ನೀಡುವುದು)

ಇ) ಸದರಿ ಯೋಜನೆಗೆ 50 ವಾರ್ಡ್‌ಗಳನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆ ಪ್ರಕ್ರಿಯೆಯನ್ನು ಯಾವ ಮಾನದಂಡಗಳ ಆಧಾರದ ಮೇಲೆ ನಡೆಸಲಾಗಿದೆ; ( ಆಯ್ಕೆಯಾಗಿರುವ ವಾರ್ಡ್‌ಗಳ ಪಟ್ಟಿ ಹಾಗೂ ಸರ್ಕಾರಿ ಆದೇಶಗಳ ಪ್ರತಿಯೊಂದಿಗೆ ಮಾಹಿತಿ ನೀಡುವುದು)

ಈ) ಪ್ರತಿ ಕೇಂದ್ರಕ್ಕೆ ಎಷ್ಟು ಹಣ ನಿಗದಿಪಡಿಸಲಾಗಿದೆ; ಈಗಾಗಲೇ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿದ್ದಲ್ಲಿ, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಕಾಮಗಾರಿಯ ವರದಿಯನ್ನು ಸರ್ಕಾರದ ಅಧಿಕೃತ ದಾಖಲೆಗಳ ಪ್ರತಿಯೊಂದಿಗೆ ಮಾಹಿತಿ ನೀಡುವುದು);

----

**15/4/839**

**ಪ್ಲಾಸ್ಟಿಕ್ ನಿಷೇಧ**

**1084 ಡಾ|| ಅಶ್ವಥ್ ನಾರಾಯಣ್ ಸಿ.ಎನ್. (ಮಲ್ಲೇಶ್ವರಂ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸರ್ಕಾರದ ಅಧಿಸೂಚನೆ ದಿನಾಂಕ:11.03.2016ರಂದು ಕೆಲವು ಪ್ಲಾಸ್ಟಿಕ್ ವಸ್ತುಗಳ ಮಾರಾಟ ಬಳಕೆಯನ್ನು ನಿಷೇಧಿಸಿದ್ದು, ಇನ್ನೂ ಅನುಷ್ಠಾನವಾಗದಿರಲು ಕಾರಣಗಳೇನು; (ವಿವರ ನೀಡುವುದು)

ಆ) ನಿಷೇಧಿತ ವಸ್ತುಗಳ ಪಟ್ಟಿಯಲ್ಲಿ ಒಂದು ಸಾರಿ ಉಪಯೋಗಿಸಿ ಬಿಸಾಡುವ ವಸ್ತುಗಳಾದ ತಟ್ಟೆ, ಲೋಟ, ಬೋಲ್, ಕೈ ಚೀಲ ಇತರೆ ಪ್ಲಾಸ್ಟಿಕ್ ಹೆಚ್ಚಾಗಿದ್ದು, ಎಲ್ಲಾ ಸಮಾರಂಭಗಳಲ್ಲಿ ಇವುಗಳ ಬಳಕೆ ಹೇರಳವಾಗಿರುವುದರಿಂದ ಘನ ತ್ಯಾಜ್ಯ ನಿರ್ವಹಣೆ ಕಷ್ಟವಾಗುತ್ತಿದ್ದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಪ್ಲಾಸ್ಟಿಕ್ ನಿಷೇಧ ಕಾಯ್ದೆಯನ್ನು ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ರಾಜ್ಯ ವ್ಯಾಪ್ತಿ ಸದರಿ ಕಾಯ್ದೆ ಯಾವಾಗ ಕಾರ್ಯರೂಪಕ್ಕೆ ಬರಲಿದೆ? (ವಿವರ ನೀಡುವುದು)

----

**15/4/840**

**ಘನತ್ಯಾಜ್ಯ ನಿರ್ವಹಣೆ**

**1085 ಡಾ|| ಅಶ್ವಥ್ ನಾರಾಯಣ್ ಸಿ.ಎನ್. (ಮಲ್ಲೇಶ್ವರಂ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರಸ್ತುತ ಎಷ್ಟು ಭೂ ಭರ್ತಿ ಕೇಂದ್ರಗಳಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುತ್ತಿದೆ; (ಕೇಂದ್ರಗಳ ವಿಳಾಸವಾರು ಸಾಮರ್ಥ್ಯದೊಂದಿಗೆ ಮಾಹಿತಿಯನ್ನು ಸರ್ಕಾರದ ಅಧಿಕೃತ ದಾಖಲೆಗಳ ಪ್ರತಿಯೊಂದಿಗೆ ನೀಡುವುದು)

ಆ) ಸದರಿ ಕೇಂದ್ರಗಳಿಗೆ ಪ್ರತಿದಿನ ಎಷ್ಟೆಷ್ಟು ಟನ್ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ; (ಕೇಂದ್ರವಾರು ಮಾಹಿತಿಯನ್ನು ಸರ್ಕಾರದ ಅಧಿಕೃತ ದಾಖಲೆಗಳ ಪ್ರತಿಯೊಂದಿಗೆ ನೀಡುವುದು)

ಇ) ಸದರಿ ಕೇಂದ್ರಗಳ ನಿರ್ವಹಣೆಯನ್ನು ಯಾರು ನಡೆಸುತ್ತಿದ್ದಾರೆ (ಕೇಂದ್ರವಾರು ಮಾಹಿತಿಯನ್ನು ಸರ್ಕಾರದ ಅಧಿಕೃತ ದಾಖಲೆಗಳ ಪ್ರತಿಯೊಂದಿಗೆ ನೀಡುವುದು)

ಈ) ಪ್ರತಿ ತಿಂಗಳು ಸದರಿ ಕೇಂದ್ರಗಳ ನಿರ್ವಹಣೆಗೆ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ; (ಕೇಂದ್ರವಾರು ಮಾಹಿತಿಯನ್ನು ಸರ್ಕಾರದ ಅಧಿಕೃತ ದಾಖಲೆಗಳ ಪ್ರತಿಯೊಂದಿಗೆ ನೀಡುವುದು)

ಉ) ಸದರಿ ಕೇಂದ್ರಗಳ ನಿರ್ವಹಣೆಯ ಗುತ್ತಿಗೆಯನ್ನು ಟೆಂಡರ್ ಮೂಲಕ ನೀಡಲಾಗಿದೆಯೇ ಅಥವಾ ನೇರಗುತ್ತಿಗೆ

ನೀಡಲಾಗಿದೆಯೇ; (ಕಾರಣ ಸಹಿತ ಮಾಹಿತಿಯನ್ನು ಕೇಂದ್ರವಾರು ಸರ್ಕಾರಿ ಆದೇಶಗಳಪ್ರತಿಯೊಂದಿಗೆ ನೀಡುವುದು)

ಊ) ಒಂದು ವೇಳೆ ನೇರಗುತ್ತಿಗೆ ನೀಡಿದ್ದಲ್ಲಿ ಪಾರದರ್ಶಕ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೆ? (ಸರ್ಕಾರಿ ಆದೇಶಗಳ ಪ್ರತಿಯೊಂದಿಗೆ ಮಾಹಿತಿ ನೀಡುವುದು)

----

15/4/826

**ರಸ್ತೆ ದುರಸ್ಥಿ**

**1086 ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆ, ಮೂಡಲಗಿ ತಾಲ್ಲೂಕಿನ ಅರಬಾವಿ ಮತಕ್ಷೇತ್ರದ ಕುಲಗೋಡುಯಾದವಾಡ ಲೋಕೋಪಯೋಗಿ ಇಲಾಖೆಯ ರಸ್ತೆ ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳಿದ್ದು, ವಿವಿಧ ಭಾಗಗಳಿಂದ ರೈತರು ಕಬ್ಬನ್ನು ಸಾಗಿಸಬೇಕಾಗಿದ್ದು, ರಸ್ತೆ ಹಾಳಾಗಿರುವುದರಿಂದ ರೈತರುಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ , ಈ ರಸ್ತೆಯ ದುರಸ್ಥಿಗೆ ಸರ್ಕಾರ ಅನುದಾನವನ್ನೇನಾದರೂ ನಿಗಧಿಪಡಿಸಿದೆಯೇ;

ಈ) ಹಾಗಿದ್ದಲ್ಲಿ ಸದರಿ ರಸ್ತೆ ದುರಸ್ಥಿಯ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?ಸ (ಸಂಪೂರ್ಣ ಮಾಹಿತಿ ನೀಡುವುದು)

----

15/4/827

**ರಸ್ತೆ ದುರಸ್ಥಿ**

**1087 ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆ, ಮೂಡಲಗಿ ತಾಲ್ಲೂಕಿನ, ಅರಬಾವಿ ಮತಕ್ಷೇತ್ರದ ಸುಣದೋಳಿ ಮೂಡಲಗಿ ಲೋಕೋಪಯೋಗಿ ಇಲಾಖೆಯ ರಸ್ತೆ ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳಿದ್ದು, ವಿವಿಧ ಭಾಗಗಳಿಂದ ರೈತರು ಕಬ್ಬನ್ನು ಸಾಗಿಸಬೇಕಾಗಿದ್ದು, ರಸ್ತೆ ಹಾಳಾಗಿರುವುದರಿಂದ ರೈತರುಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ , ಈ ರಸ್ತೆಯ ದುರಸ್ಥಿಗೆ ಸರ್ಕಾರದ ಅನುದಾನವನ್ನೇನಾದರೂ ನಿಗಧಿಪಡಿಸಿದೆಯೇ;

ಈ) ಸದರಿ ರಸ್ತೆ ದುರಸ್ಥಿಯ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

----

15/4/828

**ಸಿ.ಆರ್.ಎಫ್ ಯೋಜನೆ**

1088 **ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಗೋಕಾಕ ತಾಲ್ಲೂಕಿನ ರಾಜ್ಯ ಹೆದ್ದಾರಿಗಳು ಸಿ.ಆರ್.ಎಫ್ ಯೋಜನೆಯಡಿ ಮಂಜೂರಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿ ಫೆಬ್ರವರಿ 2018ರಲ್ಲಿ ಬಿಲ್ ಸಲ್ಲಿಸಿದ್ದರೂ ಈವರಗೆ ಹಣ ಸಂದಾಯವಾಗದೆ ಇರುವುದರಿಂದ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ, ಈ ಗುತ್ತಿಗೆದಾರರಿಗೆ ಯಾವಾಗ ಹಣ ಪಾವತಿಸಲಾಗುವುದು; (ಮಾಹಿತಿ ನೀಡುವುದು)

ಇ) 2016-17ನೇ ಸಾಲಿನ ಸಿ.ಆರ್.ಎಫ್ ಯೋಜನೆಯಡಿ ಗೋಕಾಕ ತಾಲ್ಲೂಕಿನ ತಿಮ್ಮಾಪುರದಿಂದ ತಿಗಡಿವರೆಗೆ ಕಿ.ಮೀ 0.00 ದಿಂದಿ 30.00 ರವರೆಗೆ ರಸ್ತೆ ಸುಧಾರಣೆ ಮೊತ್ತ ರೂ.5.00 ಕೋಟಿ ಹಾಗೂ ಅರಬಾವಿಚಳ್ಳಕೆರೆರಾಷ್ಟ್ರೀಯ ಹೆದ್ದಾರಿ 45 ರಸ್ತೆಯನ್ನು ಸುಧಾರಣೆ ಮಾಡುವ ಅಂದಾಜು ಮೊತ್ತ 3.00ಕೋಟಿಯ ಎರಡು ಕಾಮಗಾರಿಗಳಿಗೆ ನವೆಂಬರ್ 2016ರಲ್ಲಿ ಹುಬ್ಬಳ್ಳಿ ವಿಭಾಗದಿಂದ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಗಳಿಗೆ ಕರೆದಿರುವ ಟೆಂಡರ್ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ;

ಉ) ಸದರಿ ರಸ್ತೆಗಳು ತೀರಾಹಾಳಾಗಿದ್ದು, ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುವುದರಿಂದ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

----

**15/4/1420**

## ಜಿ+3 ಮತ್ತು ಇತರೆ ಕಟ್ಟಡಗಳು

1089 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿ+3 ಮತ್ತು ಇತರೆ ಮಹಡಿ ಕಟ್ಟಡಗಳ ನಿರ್ಮಾಣಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಅರ್ಜಿಗಳಿಗೆ ಪರವಾನಿಗೆ ನೀಡಲಾಗಿದೆ; ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ ಎಷ್ಟು;ತಿರಸ್ಕರಿಸಲು ಕಾರಣಗಳೇನು; (ಸರ್ವೆ/ಸಿ.ಟಿ.ಎಸ್/ವಿಸ್ತೀರ್ಣ, ಭೂ ಉಪಯೋಗ, ಮಾಲೀಕರ ಹೆಸರುಗಳ ವಿವರ ನೀಡುವುದು)

ಆ) ಜಿ+3 ಮತ್ತು ಅದಕ್ಕಿಂತಲೂ ಹೆಚ್ಚಿನ ಕಟ್ಟಡ ನಿರ್ಮಾಣಕ್ಕಾಗಿ ಪರವಾನಿಗೆ ನೀಡುವಾಗ ಪಾಲಿಕೆಯು ವಿಧಿಸಿರುವ ನಿಯಮಗಳು ಯಾವುವು; ಎಷ್ಟು ಮಹಡಿಗಳನ್ನು ನಿರ್ಮಾಣ ಮಾಡಲು ಪರವಾನಿಗೆ ನೀಡಲಾಗಿದೆ;

ಇ) ಕಟ್ಟಡಗಳನ್ನು ನಿರ್ಮಾಣ ಮಾಡಿದ ಮಾಲೀಕರ ಸಂಖ್ಯೆ ಮತ್ತು ಕಟ್ಟಡಗಳ ಸಂಖ್ಯೆ ಎಷ್ಟು;

ಈ) ಸದರಿ ಮಹಡಿಗಳನ್ನು ನಿರ್ಮಾಣ ಮಾಡುವಲ್ಲಿ ಮಾಲೀಕರು ನಿಯಮಗಳನ್ನು ಉಲ್ಲಂಘನೆ ಮಾಡಿರುವ ಬಗ್ಗೆ ಇಲಾಖೆಗೆ ಮಾಹಿತಿ ಇದೆಯೇ; ಹಾಗಿದ್ದಲ್ಲಿ ಸದರಿಯವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು; (ಮಾಲೀಕರ ಹೆಸರು ಸಹಿತ ಕಟ್ಟಡದ ಸಂಖ್ಯೆಯೊಂದಿಗೆ ವಿವರವಾದ ಮಾಹಿತಿಒದಗಿಸುವುದು)

ಊ) ಜಿ+3 ಮತ್ತು ಇತರೆ ಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಪಾಲಿಕೆಯಿಂದ ಪರವಾನಿಗೆ ಪಡೆದ ವಿಸ್ತೀರ್ಣದ ಪ್ರದೇಶವೆಷ್ಟು; (ಪರವಾನಿಗೆಯ ದಿನಾಂಕ ಮತ್ತು ಮುಕ್ತಾಯದ ಪ್ರಮಾಣ ಪತ್ರವನ್ನು ನೀಡಿದ ದಿನಾಂಕ ಹಾಗೂ ಅಂತಿಮವಾಗಿ ನಿರ್ಮಾಣ ಮಾಡಿರುವ ವಿಸ್ತೀರ್ಣ ಪ್ರದೇಶದ ವಿವರಗಳನ್ನು ಕಟ್ಟಡವಾರು ವಿವರವಾದ ಮಾಹಿತಿ ನೀಡುವುದು)

ಋ) ಕಟ್ಟಡಗಳ ನಿರ್ಮಾಣದ ಸ್ಥಳಕ್ಕೆ ಕಾರ್ಯದ ಆರಂಭದಿಂದ ಮುಕ್ತಾಯದವರೆಗೆ ಪಾಲಿಕೆಯ ಅಧಿಕಾರಿಗಳು

ವಿವಿಧ ಹಂತಗಳಲ್ಲಿ ಭೇಟಿ ನೀಡುವ ನಿಯಮ ಇದೆಯೇ; ಹಾಗಿದ್ದಲ್ಲಿ, ಯಾವ ಯಾವ ಅಧಿಕಾರಿಗಳು ಎಷ್ಟು ಬಾರಿ ಯಾವ ಯಾವ ಕಟ್ಟಡ ಕಾಮಗಾರಿಗಳನ್ನು ಪರಿಶೀಲನೆ ಮಾಡಲು ಭೇಟಿ ನೀಡಿದ್ದಾರೆ ; (ಕಟ್ಟಡಗಳ ವಿವರ ಹಾಗೂ ಕಟ್ಟಡವಾರು ಭೇಟಿ ನೀಡಿದ ಮಾಹಿತಿ ನೀಡುವುದು)

----

**15/4/1421**

**ವಿವಿಧ ಯೋಜನೆಯಡಿ ಮನೆಗಳ ಮಂಜೂರಾತಿ**

1090 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜೀವಗಾಂಧಿ ವಸತಿ ನಿಗಮದಿಂದ ಬಸವ , ಡಾ: ಬಿ. ಆರ್. ಅಂಬೇಡ್ಕರ್, ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಸಂಬಂಧಿಸಿದಂತೆ 201819ನೇ ಸಾಲಿನಲ್ಲಿ ಇದುವರೆಗೆ ಮನೆಗಳನ್ನು ಬಿಡುಗಡೆ ಮಾಡದೇ ವಿಳಂಬನೀತಿ ಅನುಸರಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು)

ಆ) ಸದರಿ ಯೋಜನೆಗಳಡಿಯಲ್ಲಿ ಈಗಾಗಲೇ ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುವ ಫಲಾನುಭವಿಗಳಿಗೆ ಹಂತವಾರು ಜಿ.ಪಿ.ಎಸ್ ಆಗಿ ಓಕೆ ಆಗಿದ್ದರೂ ಸಹಿತ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡದೆ ಸುಮಾರು 810 ತಿಂಗಳುಗಳಿಂದ ಫಲಾನುಭವಿಗಳು ತೊಂದರೆ ಅನುಭವಿಸುತ್ತಿರುವುದುಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ತೊಂದರೆಯನ್ನು ನಿವಾರಣೆ ಮಾಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ರೀತಿಯಾಗಿ ವಿಳಂಬ ಧೋರಣೆ ಅನುಸರಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು)

ಈ) ಸಾಮಾನ್ಯ ವರ್ಗಕ್ಕೂ ಮನೆಗಳ ಬೇಡಿಕೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ; (ಸಂಪೂರ್ಣಮಾಹಿತಿ ನೀಡುವುದು)

ಉ) ಸಾಮಾನ್ಯ ವರ್ಗಕ್ಕೆ ಮನೆಗಳನ್ನು ಒದಗಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದಾದರೂ ವಿಶೇಷ ಪ್ರಸ್ತಾವನೆ ಇದೆಯೇ;

ಊ) ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಜಾರಿಗೆ ತರಲು ಕ್ರಮಗಳನ್ನು ಕೈಗೊಂಡಿದೆಯೇ; ಇಲ್ಲವಾದಲ್ಲಿ ಸರ್ಕಾರವು ಸಾಮಾನ್ಯ ವರ್ಗಕ್ಕೆ ಮನೆಗಳನ್ನು ಒದಗಿಸಲು ಕೈಗೊಂಡಿರುವ ಹೊಸ ಯೋಜನೆಗಳೇನು? (ಮಾಹಿತಿ ಒದಗಿಸುವುದು)

----

**15/4/820**

**ನೀರು ಸೋರಿಕೆ**

1091 **ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೇಂದ್ರ ಸಾರ್ವಜನಿಕ ಆರೋಗ್ಯ ಸಂಸ್ಥೆಯ ಮಾನದಂಡದ ಪ್ರಕಾರ ಪ್ರತೀ ನಾಗರಿಕನಿಗೆ ಪ್ರತಿ ನಿತ್ಯ ಎಷ್ಟು ಲೀಟರ್ ನೀರಿನ ಅಗತ್ಯವಿದೆ;

ಆ) ಬೆಂಗಳೂರು ನಗರದಲ್ಲಿ ಪ್ರತೀ ನಾಗರೀಕನಿಗೆ ಜಲಮಂಡಳಿ ಎಷ್ಟು ಲೀಟರ್ ನೀರು ಪೂರೈಸುತ್ತಿದೆ;

ಇ) ಜಲಮಂಡಳಿ ವ್ಯಾಪ್ತಿಯಲ್ಲಿರುವ ನೀರಿನ ಸಂಪರ್ಕಗಳೆಷ್ಟು; ಅಧಿಕೃತ ಮತ್ತು ಆಕ್ರಮ ಸಂಪರ್ಕಗಳೆಷ್ಟು; (ಪ್ರತೇಕ ವಿವ|ರವನ್ನು ವಿಧಾನಸಭಾ ಕ್ಷೇತ್ರವಾರು ಒದಗಿಸುವುದು)

ಈ) ಈ ಆಕ್ರಮ ಸಂಪರ್ಕವನ್ನು ತೆರವುಗೊಳಿಸಲು ಕೈಗೊಂಡ ಕ್ರಮಗಳೇನು; ಕಳೆದ 3 ವರ್ಷಗಳಿಂದ ಎಷ್ಟು

ಅಕ್ರಮ ಸಂಪರ್ಕಗಳನ್ನು ತೆರವುಗೊಳಿಸಲಾಗಿದೆ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)
ಉ) ಬೆಂಗಳೂರು ಜಲಮಂಡಳಿ ಸರಬರಾಜು ಮಾಡುವ ನೀರಿನಲ್ಲಿ ಸೋರಿಕೆ ಆಗುತ್ತಿರುವ ನೀರಿನ ಪ್ರಮಾಣ ಎಷ್ಟು; ಈ ಸೋರಿಕೆಯನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು;
ಊ) ಕಳೆದ 3 ವರ್ಷಗಳಿಂದ ಎಷ್ಟು ಪ್ರಮಾಣದ ಸೋರಿಕೆಯನ್ನು ತಡೆಗಟ್ಟಲಾಗಿದೆ; ನೀರಿನ ಸೋರಿಕೆಯನ್ನು ತಡೆಗಟ್ಟಲು ವಿಫಲವಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು (ವಿವರನೀಡುವುದು)?

----

**15/4/821**

## ಉಗ್ರರ ಉಪಟಳ

**1092 ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಉಗ್ರರ ಉಪಟಳ ಹೆಚ್ಚಾಗುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ; ಬೆಳಿಗ್ಗೆ ಹೇಗೆ ಬಂದಿರುತ್ತದೆ; ಎಷ್ಟು ಜನ ಉಗ್ರವಾದಿಗಳಿದ್ದಾರೆಂದು ಗುರುತಿಸಲಾಗಿದೆ; ಇವರುಗಳ ಪತ್ತೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;
ಆ) ಉಗ್ರರ ಚಟುವಟಿಕೆಗಳ ಮೇಲೆ ಸರ್ಕಾರ ತೀವ್ರ ನಿಗಾ ವಹಿಸಿದೆಯೇ; ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು; ಇವರೊಂದಿಗೆ ಶಾಮೀಲಾಗಿರುವವರು ಹಾಗೂ ಕೈಜೋಡಿಸಿರುವವರು ಯಾರು; (ವಿವರಗಳನ್ನು ಒದಗಿಸುವುದು)
ಇ) ಈ ರೀತಿಯ ಅಪರಾಧ ಚಟುವಟಿಕೆಗಳಲ್ಲಿ ಭಾಗವಹಿಸಿರುವವರನ್ನು ಹಾಗೂ ಅಕ್ರಮವಾಗಿ ವಲಸೆ ಬಂದು ವಾಸಿಸುತ್ತಿರುವ ವಿದೇಶಿ ಪ್ರಜೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;
ಈ) ಅಕ್ರಮ ವಿದೇಶಿ ವಲಸಿಗರನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಬಂಧಿಸಿರುವ ಅಕ್ರಮ ವಿದೇಶಿ ವಲಸಿಗರ ಹಾಗೂ ಉಗ್ರರ ಚಟುವಟಿಕೆ ಹಿನ್ನೆಲೆಯಲ್ಲಿ ಎಷ್ಟು ಜನರನ್ನು ವಿಚಾರಣೆಗೊಳಪಡಿಸಲಾಗಿದೆ ಎಷ್ಟು ಜನರನ್ನು ಬಂಧಿಸಲಾಗಿದೆ; (ಕಳೆದ 6 ತಿಂಗಳ ಮಾಹಿತಿ ಒದಗಿಸುವುದು)

----

**15/4/822**

## ಅಕ್ಕಿಯ ಅಕ್ರಮ ಸಾಗಾಣಿಕೆ

**1093 ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪಡಿತರ ಅಕ್ಕಿಯನ್ನು ಅಕ್ರಮವಾಗಿ ರಾಜ್ಯದ ಒಳಗಡೆ ಹಾಗೂ ನೆರೆ ರಾಜ್ಯಗಳಿಗೆ ಸಾಗಣೆ ಮಾಡಿ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)
ಆ) ಕಳೆದ 3 ವರ್ಷಗಳಿಂದ ಎಷ್ಟು ಪಡಿತರ ಧಾನ್ಯಗಳನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿರುವ ಪ್ರಕರಣ ದಾಲಾಗಿರುತ್ತವೆ;
ಇ) ಅಕ್ರಮವಾಗಿ ಸಾಗಣೆ ಮಾಡುತ್ತಿರುವವರ ಮೇಲೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

----

15/4/814

## ಐ.ಟಿ. ಪಾರ್ಕ್ ನಿರ್ಮಾಣ

1094 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಎಷ್ಟು ಐ.ಟಿ. ಪಾರ್ಕ್‌ಗಳಿವೆ; ಇವುಗಳಲ್ಲಿ ಎಷ್ಟು ಐ.ಟಿ. ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ; (ಕಂಪನಿಗಳ ಹೆಸರಿನೊಂದಿಗೆ ಪಟ್ಟಿ ನೀಡುವುದು)
ಆ) ನಿರುದ್ಯೋಗ ತಾಂತ್ರಿಕ ಪದವೀಧರರ ಹಿತದೃಷ್ಟಿಯಿಂದ ಉತ್ತರ ಕರ್ನಾಟಕದಲ್ಲೊಂದು ಬೃಹತ್ ಐ.ಟಿ. ಪಾರ್ಕ್ ನಿರ್ಮಾಣ ಮಾಡಲು ಸರ್ಕಾರದ ಕ್ರಮವೇನು;
ಇ) ನಿರುದ್ಯೋಗ ತ್ರಾಂತ್ರಿಕ ಪದವೀಧರರ ಕೌಶಲ್ಯಾಭಿವೃದ್ಧಿಗಾಗಿ ರೂಪಿಸಿಕೊಂಡಿರುವ ಯೋಜನೆಗಳೇನು (ವಿವರ ನೀಡುವುದು)?

----

15/4/815

## ರಾಜ್ಯ ಹೆದ್ದಾರಿ ದುರಸ್ತಿ

1095 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯ ಸರ್ಕಾರ ಹಿರೇಬಾಗೇವಾಡಿ ಸಂಪಗಾವಸವದತ್ತಿ ರಾಜ್ಯ ಹೆದ್ದಾರಿ ಕಾಮಗಾರಿಗಳಿಗಾಗಿ ಎಷ್ಟು ಅನುದಾನ ನಿಗದಿಪಡಿಸಿ ಯಾವ ಸಂಸ್ಥೆಯವರಿಗೆ ರಸ್ತೆ ಸುಧಾರಣೆ ಜವಾಬ್ದಾರಿ ವಹಿಸಲಾಗಿತ್ತು;
ಆ) ಸಂಪಗಾವ ಪಕ್ಕ ರಾಜ್ಯ ಹೆದ್ದಾರಿ ಕಾಮಗಾರಿ ವಿಳಂಬದಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ಈ ಬಗ್ಗೆ ಸರ್ಕಾರದ ಕ್ರಮವೇನು;
ಈ) ಸಂಪಗಾವ ಗ್ರಾಮದ ಊರು ಮಧ್ಯ ಹಾದು ಹೋಗುವ ರಾಜ್ಯ ಹೆದ್ದಾರಿ ರಸ್ತೆ ತುಂಬಾ ಹಾಳಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಮಗಾರಿ ಆರಂಭಿಸಲು ಸೂಚನೆ ನೀಡಿರುವುದು ನಿಜವೇ;
ಉ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು? (ವಿವರ ನೀಡುವುದು)

----

15/4/816

## ಗುಂಪು ಮನೆಗಳ ನಿರ್ಮಾಣ

1096 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬಡವರಿಗಾಗಿ ಗುಂಪು ಮನೆಗಳ ನಿರ್ಮಾಣಕ್ಕೆ ಇರುವ ಮಾನದಂಡಗಳೇನು;
ಆ) ಕಳೆದ 3 ವರ್ಷಗಳಿಂದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕುಗಳಿಗೆ ಎಷ್ಟು ಗುಂಪು ಮನೆಗಳ ಕಾಮಗಾರಿ ಮಂಜೂರು ಮಾಡಲಾಗಿದೆ; (ವಿವರ ನೀಡುವುದು)

ಇ) ಸದರಿ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿ ಪೂರ್ಣಗೊಂಡಿವೆ; ಎಷ್ಟು ಅಪೂರ್ಣಗೊಂಡಿವೆ (ಗ್ರಾಮವಾರು ವಿವರ ನೀಡುವುದು)

ಈ) ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮವೇನು;

ಉ) ಯಾವ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗುವುದು?

----

15/4/817

**ಪಡಿತರ ಅಂಗಡಿಗಳು**

**1097 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಹೊಸದಾಗಿ ಪಡಿತರ ಅಂಗಡಿಗಳನ್ನು ಆರಂಭಿಸಲು ಇರುವ ಮಾನದಂಡಗಳಾವುವು;

ಆ) ಒಂದು ಪಡಿತರ ಅಂಗಡಿಗೆ ಎಷ್ಟು ಪಡಿತರ ಚೀಟಿದಾರರನ್ನು ನಿಗಧಿಪಡಿಸಲಾಗಿದೆ;

ಇ) ನಿಗಧಿಗಿಂತಲೂ ಹೆಚ್ಚಿನ ಪಡಿತರ ಚೀಟಿ ಹೊಂದಿರುವ ಗ್ರಾಮಗಳಲ್ಲಿ ಹೊಸ ಪಡಿತರ ಅಂಗಡಿಗೆ ಅರ್ಜಿ ಸಲ್ಲಿಸಬಹುದೇ;

ಈ) ಬೆಳಗಾವಿ ಜಿಲ್ಲೆ , ಚೆನ್ನಮ್ಮನ ಕಿತ್ತೂರು ವಿಧಾಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಪಡಿತರ ಅಂಗಡಿಗಳಿರುತ್ತವೆ (ವಿವರ ನೀಡುವುದು)?

----

15/4/818

**ಸಿಬ್ಬಂದಿ ನೇಮಕಾತಿ**

**1098 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಗ್ರಾಮ ಪಂಚಾಯ್ತಿಗಳಿಂದ ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯ್ತಿಗಳು ಸಿಬ್ಬಂದಿ ಮತ್ತು ಪೌರಕಾರ್ಮಿಕರ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಬೆಳಗಾವಿ ಜಿಲ್ಲೆ, ಕಿತ್ತೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಕಿತ್ತೂರು ಮತ್ತು ಎಂ.ಕೆ. ಹುಬ್ಬಳ್ಳಿ ಪಟ್ಟಣ ಪಂಚಾಯ್ತಿಗಳಲ್ಲಿ ಸಿಬ್ಬಂದಿ ಮತ್ತು ಪೌರಕಾರ್ಮಿಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಯಾವ ಕಾಲ ಮಿತಿಯಲ್ಲಿ ಈ ಎರಡೂ ಪಟ್ಟಣ ಪಂಚಾಯ್ತಿಗಳಲ್ಲಿ ಸಿಬ್ಬಂದಿ ಮತ್ತು ಪೌರಕಾರ್ಮಿಕರ ಕೊರತೆ ನಿವಾರಿಸಲಾಗುವುದು;

ಉ) ಕಿತ್ತೂರು ಮತ್ತು ಎಂ.ಕೆ ಹುಬ್ಬಳ್ಳಿ ಪಟ್ಟಣ ಪಂಚಾಯ್ತಿಯಲ್ಲಿ ಗ್ರಾಮ ಪಂಚಾಯ್ತಿಗಳನ್ನು ಪಟ್ಟಣ ಪಂಚಾಯ್ತಿಗಳಾಗಿ ಮೇಲ್ದರ್ಜೆಗೇರಿಸಿದಾಗ ಹಾಲಿ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿ ಮತ್ತು ಪೌರಕಾರ್ಮಿಕರು ವೇತನ ಭದ್ರತೆ ಮುಂತಾದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ, ಈ ತೊಂದರೆ ನಿವಾರಣೆಗೆ ಸರ್ಕಾರದಕ್ರಮಗಳೇನು? (ವಿವರ ನೀಡುವುದು)

----

15/4/834

**ಸಿ ಎ ನಿವೇಶನಗಳ ಹಂಚಿಕೆ**

1099 **ಗೂಳಿಹಟ್ಟಿ ಬಿ. ಶೇಖರ್ (ಹೊಸದುರ್ಗ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ ಬೇಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂ ಸ್ವಾಧೀನದಿಂದ ಕೈಬಿಡಲಾಗಿದೆ; ಯಾವ ಯಾವ ಸರ್ವೆ ನಂಬರ್ ಜಾಗ ಯಾರ ಹೆಸರಿನಲ್ಲಿ ಕೈ ಬಿಡಲಾಗಿದೆ; ಯಾವ ಕಾರಣಕ್ಕೆ ಕೈಬಿಡಲಾಗಿದೆ (ವಿವರ ನೀಡುವುದು);

ಆ) ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಸಿ.ಎ. ನಿವೇಶನಗಳನ್ನು ಎಷ್ಟು ಪ್ರಮಾಣದಲ್ಲಿ ಮಂಜೂರು ಮಾಡಲಾಗಿದೆ:

ಇ) ಹಾಗಿದ್ದಲ್ಲಿ, ಯಾವ ಯಾವ ಸಂಘ ಸಂಸ್ಥೆ, ವ್ಯಕ್ತಿಗಳಿಗೆ ಯಾವ ಆಧಾರದ ಮೇಲೆ ಹಂಚಿಕೆ/ಮಂಜೂರು ಮಾಡಲಾಗಿದೆ (ವಿವರ ನೀಡುವುದು)?

----

15/4/835

**ಡ್ರಗ್ ಜಾಲ ನಿಯಂತ್ರಣ**

1100 **ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ದೇಶ/ಅಂತರ ರಾಷ್ಟ್ರೀಯ ವ್ಯಾಪ್ತಿಯ ಡ್ರಗ್ ಜಾಲದ ಲ್ಯಾಬ್ ಬೆಂಗಳೂರಿನಲ್ಲಿ ತಲೆ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವರಿಗೆ ಅಗತ್ಯವಾದ ಪ್ರಯೋಗ ಉಪಕರಣ, ಮಾಧಕ ವಸ್ತುಗಳ ಸರಬರಾಜು ಹೇಗೆ ಮಾಡಲಾಗುತ್ತದೆ (ವಿವರ ನೀಡುವುದು);

ಇ) ರಾಜಾರೋಷವಾಗಿ ವ್ಯವಹಾರ ನಡೆಯುತ್ತಿದ್ದರೂ ಇದರ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿಲ್ಲವೇ;ಇದಕ್ಕಾಗಿ ವಿಶೇಷ ತಂಡ ರಚಿಸಲಾಗಿದೆಯೇ (ವಿವರ ನೀಡುವುದು);

ಈ) ಡ್ರಗ್ಸ್ ಜಾಲವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು; ಸದರಿ ಮಾಧಕ ವಸ್ತು ತಯಾರಿಸುವ ಲ್ಯಾಬ್ ಮೇಲೆ ಯಾವ ಕ್ರಮ ಜರುಗಿಸಲಾಗಿದೆ;

ಉ) ಇವರಿಂದ ವಶಪಡಿಸಿಕೊಳ್ಳಲಾದ ಸಾಮಗ್ರಿಗಳು ಯಾವುವು;

ಊ) ರಾಜ್ಯದಲ್ಲಿ ಈ ರೀತಿಯ ಪ್ರಕರಣಗಳು ಎಲ್ಲೆಲ್ಲಿ ನಡೆದಿರುತ್ತವೆ (ಜಿಲ್ಲಾವಾರು ವಿವರ ಒದಗಿಸುವುದು)?

----

15/4/836

**ಅಗ್ನಿಶಾಮಕ ಠಾಣೆಯ ಕಟ್ಟಡ**

1101 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದ ಅಗ್ನಿಶಾಮಕ ಠಾಣೆಯ ಕಟ್ಟಡಕ್ಕಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದರೂ ಸಹ ನಿರ್ಮಾಣ ಪೂರ್ಣವಾಗದಿರುವುದಕ್ಕೆ ಕಾರಣವೇನು;
ಆ) ಇದುವರೆವಿಗೂ ಕಟ್ಟಡ ನಿರ್ಮಾಣಕ್ಕೆ ಖರ್ಚಾದ ಮೊತ್ತವೆಷ್ಟು;
ಇ) ಎಷ್ಟು ದಿನಗಳಲ್ಲಿ ಅಗ್ನಿಶಾಮಕ ಠಾಣೆಯ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)?

----

**15/4/948**

**ಪೌರ ಕಾರ್ಮಿಕರ ನೇಮಕಾತಿ**

1102 **ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಆಳಂದ ಪುರಸಭೆಯಲ್ಲಿ ಪೌರ ಕಾರ್ಮಿಕರ ನೇಮಕಾತಿಯಲ್ಲಿ ಭಾರಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಪೌರ ಕಾರ್ಮಿಕರಲ್ಲದವರನ್ನು ಪೌರ ಕಾರ್ಮಿಕರೆಂದು ಯಾವ ಆಧಾರದ ಮೇಲೆ ಪರಿಗಣಿಸಲಾಗಿದೆ;
ಇ) ಪೌರ ಕಾರ್ಮಿಕರೆಂದು ಅರ್ಹರಾಗದ 52 ಜನರು ಪೂರಕ ದಾಖಲೆಗಳನ್ನು ನೀಡಿರುವರೇ; (ಹಾಜರಾತಿ, ವೇತನ ಪಡೆದಿರುವ ದಾಖಲೆ ಪೌರ ಕಾರ್ಮಿಕರಾಗಿ ಸೇವೆ ಸಲ್ಲಿಸಲು ಸಂಬಂಧಪಟ್ಟವರು ನೀಡಿರುವ ನೇಮಕಾತಿ ಆದೇಶ ಪ್ರತಿಗಳು ನೀಡುವುದು)
ಈ) ಪೌರ ಕಾರ್ಮಿಕರಲ್ಲದವರನ್ನು ಅನರ್ಹರೆಂದು ತಿರಸ್ಕರಿಸಿದ ಆಯ್ಕೆ ಸಮಿತಿ ಪುನಃ ಅರ್ಹರೆಂದು ನೇಮಕ ಮಾಡಿ ಸರ್ಕಾರದ ನಿಯಮಗಳನ್ನೇ ಉಲ್ಲಂಘಿಸಿರುವ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು?( ಸಂಪೂರ್ಣ ಮಾಹಿತಿ ನೀಡುವುದು)

----

**15/4/1152**

**ಅತಿಕ್ರಮಣ**

1103 **ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಆಳಂದ ಪಟ್ಟಣದಲ್ಲಿರುವ ನ್ಯಾಯಾಲಯದ " ಮುನುಸುಫ್ ಅದಾಲತ್" ಹೆಸರಿನಿಂದಿರುವ ಜಮೀನು ಸ.ನಂ 219/2 4.00ರಲ್ಲಿ ಖಾಸಗಿಯವರು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ನ್ಯಾಯಾಲಯದ ಆಸ್ತಿಯನ್ನೇ ಅಕ್ರಮವಾಗಿ ಪ್ರವೇಶ ಮಾಡಲು ಅವಕಾಶ ನೀಡಿರುವ ಪುರಸಭೆ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು;
ಇ) ಅತಿಕ್ರಮಣ ಮಾಡಿರುವವರನ್ನು ತೆರವು ಮಾಡಿಸಲು ಸರ್ಕಾರ ಯಾವ ಕಾನೂನಿನ ಕ್ರಮಗಳನ್ನು

ಕೈಗೊಂಡಿದೆ;( ಸಂಪೂರ್ಣ ಮಾಹಿತಿ ನೀಡುವುದು)
ಈ) " ಅದಾಲತ್ ಮುನುಸಫ್" ಹೆಸರಿನ ಸರ್ವೆ ನಂ.219/2 4.00 ಜಮೀನನ್ನು ಸರ್ವೆ ಮಾಡಿದ್ದು ಯಾವಾಗ;( ಸದರಿ ಜಮೀನಿನ ಸರ್ವೆ ಮಾಡಿದ ವರದಿಯ ಪ್ರತಿಯನ್ನು ನೀಡುವುದು)
ಉ) ಪಹಣಿಯಲ್ಲಿರುವಂತೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು; ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?( ಸಂಪೂರ್ಣ ವಿವರ ನೀಡುವುದು)

----

15/4/1153

**371J ಅಡಿ ನೇಮಕಾತಿ**

**1104 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಲೋಕೋಪಯೋಗಿ ಇಲಾಖೆವತಿಯಿಂದ ಇತ್ತೀಚೆಗೆ ಕಿರಿಯ ಅಭಿಯಂತರರು ಮತ್ತು ಸಹಾಯಕ ಅಭಿಯಂತರರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಇದರಲ್ಲಿ ಕಲಂ 371(h) ಹೈದ್ರಾಬಾದ್‌ಕರ್ನಾಟಕ ಪ್ರದೇಶದವರಿಗೆ ಮೀಸಲಾತಿ ಕಲ್ಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು)

----

15/4/1154

**ವಸತಿಯೋಜನೆಗಳು**

**1105 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಕಳೆದ 3 ವರ್ಷಗಳಿಂದ ಕಲಬುರಗಿ ಜಿಲ್ಲೆ, ಆಳಂದ ಕ್ಷೇತ್ರಕ್ಕೆ ವಸತಿ ಇಲಾಖೆಯ ವಿವಿಧ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ? (ಯೋಜನಾವಾರು ಹಾಗೂ ಗ್ರಾಮ ಪಂಚಾಯಿತಿವಾರು ಸಂಪೂರ್ಣ ವಿವರ ನೀಡುವುದು)

----

15/4/1148

**ರಸ್ತೆ ಪರಿಮಿತಿ**

**1106 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆಗಳಿಗೆ ರಸ್ತೆಯ ಮಧ್ಯಭಾಗದಿಂದ ಅಕ್ಕಪಕ್ಕಕ್ಕೆ ಕ್ರಮವಾಗಿ 4040 ಮೀಟರ್ ಮತ್ತು 25 ಮೀಟರ್ ರಸ್ತೆ ಪರಿಮಿತಿಯನ್ನು ನಿಗಧಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ರಸ್ತೆ ಪರಿಮಿತಿಯ ಜಮೀನುಗಳಿಗೆ ಪರಿಹಾರ ಕೊಡದೇ ಭೂಸ್ವಾಧೀನಪಡಿಸಿಕೊಳ್ಳದೇ,

ಸದರಿ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲು ಬಿಡದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;
ಇ) ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಪರಿಹಾರ ನೀಡುವ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು)

----

15/4/1149

**ಹೊಸ ತಾಲ್ಲೂಕು ಪಂಚಾಯಿತಿಗಳ ರಚನೆ**

**1107 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಹೊಸದಾಗಿ ಮಂಜೂರಾದ ತಾಲ್ಲೂಕುಗಳಲ್ಲಿ ಪ್ರತ್ಯೇಕವಾದ ತಾಲ್ಲೂಕು ಪಂಚಾಯಿತಿಗಳನ್ನು ರಚಿಸಿ, ತಾಲ್ಲೂಕು ಪಂಚಾಯತಿ ಸದಸ್ಯರನ್ನು ಯಾವಾಗ ವಿಂಗಡನೆ ಮಾಡಲಾಗುವುದು;
ಆ) ಯಾವಾಗ ತಾಲ್ಲೂಕು ಪಂಚಾಯಿತಿಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ (ವಿವರ ನೀಡುವುದು)?

----

15/4/1150

**ಗ್ಯಾಸ್ ಸಂಪರ್ಕ**

**1108 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯ ಸರ್ಕಾರದ ಅನಿಲ ಭಾಗ್ಯ ಯೋಜನೆಯಡಿಯಲ್ಲಿ ಗ್ಯಾಸ್ ಸಂಪರ್ಕ ಪಡೆಯದಿರುವ ಪಡಿತರ ಚೀಟಿಗಳಲ್ಲೂ ಸಹ ಗ್ಯಾಸ್ ಸಂಪರ್ಕ ನಮೂದಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಈ ರೀತಿ ನಮೂದಿಸಲ್ಪಟ್ಟಿರುವುದರಿಂದ ಫಲಾನುಭವಿಗಳಿಗೆ ಆಗುವ ತೊಂದರೆಗೆ ಕಾರಣ ಯಾರು (ವಿವರ ನೀಡುವುದು);
ಇ) ಈ ತೊಂದರೆಯನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು?

----

15/4/1445

**ಸಂಘಟನೆಗಳ ವಿರುದ್ಧ ಮೊಕದ್ದಮೆ**

**1109 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ 3 ವರ್ಷಗಳಿಂದ ಎಷ್ಟು ಮುಸ್ಲಿಂ ಸಂಘಟನೆಗಳ ವಿರುದ್ಧ ಮೊಕದ್ದಮೆ ಹೂಡಲಾಗಿರುತ್ತದೆ;

ಆ) ಎಷ್ಟು ಮೊಕದ್ದಮೆಗಳನ್ನು ಹಿಂಪಡೆಯಲಾಗಿದೆ; ಮೊಕದ್ದಮೆಗಳನ್ನು ಹಿಂಪಡೆಯಲು ಕಾರಣಗಳೇನು; (ಪ್ರಕರಣವಾರು ವಿವರ ನೀಡುವುದು)
ಇ) ಎಷ್ಟು ಹಿಂದೂ ಸಂಘಟನೆಗಳ ವಿರುದ್ಧದ ಮೊಕದ್ದಮೆಗಳನ್ನು ಹಿಂಪಡೆಯಲಾಗಿದೆ; ಹಿಂಪಡೆಯಲು ಕಾರಣವೇನು;( ವಿವರ ನೀಡುವುದ)
ಈ) ಹಿಂದೂ ಸಂಘಟನೆಗಳ ವಿರುದ್ಧದ ಮೊಕದ್ದಮೆ ಹಿಂಪಡೆಯದಿದ್ದರೆ ಯಾವ ಕಾರಣಕ್ಕೆ ಹಿಂಪಡೆದಿರುವುದಿಲ್ಲ? (ಸಂಪೂರ್ಣ ವಿವರ ನೀಡುವುದ)

----

15/4/1446

**ಲೋಕೋಪಯೋಗಿ ರಸ್ತೆಗಳು**

**1110 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಲೋಕೋಪಯೋಗಿ ಇಲಾಖೆಯಡಿ ಬರುವ ಯೋಜನೆಗಳು ಯಾವುವು; (ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರತ್ಯೇಕವಾದ ವಿವರ ನೀಡುವುದು)
ಆ) ಕಳೆದ 3 ವರ್ಷಗಳಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು; (ಕಾಮಗಾರಿವಾರು ವಿವರ ನೀಡುವುದು)

----

15/4/1340

**ಒಳಚರಂಡಿ ತ್ಯಾಜ್ಯ ನಿರ್ವಹಣೆ**

**1111 ಬಿ. ಹರ್ಷವರ್ಧನ್ (ನಂಜನಗೂಡು):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನಂಜನಗೂಡು ಪಟ್ಟಣದಲ್ಲಿ ನಿರ್ಮಿಸಿರುವ ಒಳಚರಂಡಿಯ ತ್ಯಾಜ್ಯವು ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಹೋಗುತ್ತಿದೆಯೇ; ಹೋಗದಿರಲು ಕಾರಣಗಳೇನು;
ಆ) ಒಳಚರಂಡಿಯ ನೀರು ಕಬಿನಿ ನದಿಗೆ ಬಿಡಲಾಗಿದೆಯೇ; ಈ ಒಳಚರಂಡಿಯ ನೀರಿನಿಂದ ಕಬಿನಿ ನದಿ ನೀರು ಮಲಿನವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು;
ಇ) ನಂಜನಗೂಡು ಪಟ್ಟಣ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದರೂ ಗ್ರಾಮ ಪಂಚಾಯಿತಿಗಳಿಂದ ನಕ್ಷೆ ಅನುಮೋದಿಸಿಕೊಂಡು ಎಷ್ಟು ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ; (ವಿವರ ನೀಡುವುದು)
ಈ) ನಂಜನಗೂಡು ಪಟ್ಟಣದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದಲೇ ನಿರ್ಮಾಣ ಮಾಡಿರುವ ಬಡಾವಣೆಗಳು ಎಷ್ಟು; ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿತವಾಗಿರುವ ಖಾಸಗಿ ಬಡಾವಣೆಗಳೆಷ್ಟು; ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡುವಲ್ಲಿ ಎಲ್ಲಾ ನಿಯಮಗಳನ್ನು ಪಾಲಿಸಲಾಗಿದೆಯೇ; (ವಿವರ ನೀಡುವುದು)
ಉ) ನಂಜನಗೂಡಿನ ನಗರಸಭೆ ಕಛೇರಿಯು ದುಸ್ಥಿತಿಯಲ್ಲಿದ್ದು, ಜನಸಂದಣಿಯಜಾಗದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ ನಗರಸಭಾ ಕಛೇರಿಯ ಹೊಸ ಕಟ್ಟಡವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಲಾಗಿದೆಯೇ? (ವಿವರ ನೀಡುವುದು)

----

15/4/843

**ರಸ್ತೆ ಕಾಮಗಾರಿ**

1112 **ಮಹದೇವಪ್ಪ ಶಿವಲಿಂಗಪ್ಪ ಯಡವಾಡ್ (ರಾಮದುರ್ಗ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಂಗಳೂರಿನ ರೈಲ್ವೆ ಸ್ಟೇಷನ್ ಬಳಿ ನಿರ್ಮಿಸುತ್ತಿರುವ ಓಕಳಿಪುರಂ ರೈಲ್ವೆ ನಿಲ್ದಾಣದ ಟ್ರಾಫಿಕ್ ರಸ್ತೆ ಕಾಮಗಾರಿ ಕೆಲಸಗಳ ಮೊತ್ತವೆಷ್ಟು;
ಆ) ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಎಷ್ಟು ಕಾಲಾವಧಿಯಲ್ಲಿ ಮುಗಿಸಬೇಕೆಂದು ಕರಾರಿನಲ್ಲಿರುತ್ತದೆ; (ವಿವರ ನೀಡುವುದು)
ಇ) ಈ ರಸ್ತೆಗಳನ್ನು ನಿರ್ಮಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಈ ರಸ್ತೆ ನಿರ್ಮಿಸುತ್ತಿರುವ ಬದಿಯಲ್ಲಿ ಸಮರ್ಪಕವಾಗಿ ಮಳೆ ನೀರು ಚರಂಡಿ ಮುಖಾಂತರ ಸುಲಭವಾಗಿ ಹರಿಯಲು ಅವಕಾಶ ಕಲ್ಪಿಸಲಾಗಿದೆಯೇ; (ವಿವರ ನೀಡುವುದು)
ಉ) ಮಳೆ ಬಂದಿದ್ದಲ್ಲಿ, ಸದರಿ ರಸ್ತೆಯಲ್ಲಿ ಯಾವಾಗಲೂ ನೀರು ತುಂಬಿಕೊಂಡು ವಾಹನಗಳು ಓಡಾಡುವುದಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಊ) ಬಂದಿದ್ದಲ್ಲಿ, ಸುಗಮವಾಗಿ ಓಡಾಡಲು ಕೈಗೊಂಡ ಮುಂಜಾಗ್ರತಾ ಕ್ರಮಗಳೇನು?

----

15/4/1256

**ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ**

1113 **ಎ. ಮಂಜುನಾಥ್ (ಮಾಗಡಿ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201617 ನೇ ಸಾಲಿನಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಡದಿ ಪುರಸಭೆ ವ್ಯಾಪ್ತಿಯಲ್ಲಿ ಬಿಡದಿ ಹಾಗೂ ಸುತ್ತಮುತ್ತಲಿನ ಗ್ರಾಮಗಳನ್ನು ಒಳಗೊಂಡಂತೆ ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರವೆಂದು ಸರ್ಕಾರ ಅಧಿಸೂಚನೆ ಹೊರಡಿಸಿದ್ದರೂ ಸಹ ಕಛೇರಿ ಸ್ಥಳಾಂತರ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಸದರಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮನೆ ನಿರ್ಮಾಣಕ್ಕಾಗಿ ನಕ್ಷೆ ಅನುಮೋದನೆ ಪಡೆಯುವುದು ಕಡ್ಡಾಯವಾಗಿದ್ದರೂ ಸಹ ಪುರಸಭೆ ವತಿಯಿಂದ ಅನುಮೋದನೆ ನೀಡದೆ ಇರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)
ಇ) ನಕ್ಷೆ ಅನುಮೋದನೆ ನೀಡದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಂಡು ಶಾಶ್ವತ ಪರಿಹಾರವನ್ನು ಕಲ್ಪಿಸಲಾಗುವುದು?

----

15/4/1257

**ಕಸವಿಲೇವಾರಿ ಘಟಕ ನಿರ್ಮಾಣ**

1114 **ಎ. ಮಂಜುನಾಥ್ (ಮಾಗಡಿ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲ ಕರೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿರುವ 36 ಎಕರೆ ಪ್ರದೇಶದ ಜಮೀನಿನಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಕಸವಿಲೇವಾರಿ ಘಟಕ ನಿರ್ಮಾಣ ಮಾಡಲು ಟಿ.ಡಿ.ಆರ್ ಹೊರಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಉದ್ದೇಶಿತ ಕಸವಿಲೇವಾರಿ ಘಟಕ ನಿರ್ಮಾಣ ಮಾಡುವುದರಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಬಿ.ಬಿ.ಎಂ.ಪಿ ವತಿಯಿಂದ ಕಸವಿಲೇವಾರಿ ಘಟಕ ನಿರ್ಮಾಣ ಮಾಡಲು ಹೊರಡಿಸಿರುವ ಟಿ.ಡಿ.ಆರ್ ಅನ್ನು ರದ್ದುಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ರೈತರಿಂದ ಭೂ ಸ್ವಾಧೀನ ಪಡಿಸಿಕೊಂಡ ರೈತರಿಗೆ ಪುನರ್ ಪರಿಹಾರ ಕಲ್ಪಿಸಲಾಗುವುದೇ? (ವಿವರ ನೀಡುವುದು)

----

15/4/1258

**ಬಡಾವಣೆ ನಿರ್ಮಾಣ**

1115 **ಎ. ಮಂಜುನಾಥ್ (ಮಾಗಡಿ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮಾಗಡಿ ತಾಲ್ಲೂಕಿನಲ್ಲಿ ವಸತಿಹೀನರಿಗೆ ವಸತಿ ಸೌಲಭ್ಯ ಕಲ್ಪಿಸಲು ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವತಿಯಿಂದ ಬಡಾವಣೆಯನ್ನು ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಅವಧಿಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿವತಿಯಿಂದ ಬಡಾವಣೆಯನ್ನು ನಿರ್ಮಾಣ ಮಾಡಲಾಗುವುದು; (ವಿವರ ನೀಡುವುದು)

ಇ) ಈಗಾಗಲೇ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಬಡಾವಣೆಯನ್ನು ನಿರ್ಮಾಣ ಮಾಡಲಾಗಿದೆಯೆ;

ಈ) ಮಾಗಡಿ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿವತಿಯಿಂದ ಬಡಾವಣೆಯನ್ನು ನಿರ್ಮಾಣ ಮಾಡದೇ ಇರುವುದಕ್ಕೆ ಕಾರಣಗಳೇನು;

ಇ) ಬಡಾವಣೆ ನಿರ್ಮಾಣಕ್ಕಾಗಿ ಜಮೀನನ್ನು ಈಗಾಗಲೇ ಗುರುತಿಸಲಾಗಿದೆಯೇ? (ವಿವರ ನೀಡುವುದು)

----

15/4/1341

**ಕಳಪೆಮಟ್ಟ ಮನೆಗಳ ನಿರ್ಮಾಣ**

1116 **ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ತುರುವೇಕೆರೆ ಮತಕ್ಷೇತ್ರದ ತುರುವೇಕೆರೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮನೆಗಳು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; ಅದರ ಅಂದಾಜು ವೆಚ್ಚ ಎಷ್ಟು; (ಯೋಜನಾವಾರು, ಫಲಾನುಭವಿಗಳ ಹೆಸರು, ವಿಳಾಸ ಸಮೇತ ನೀಡುವುದು)

ಇ) ಸದರಿ ನಿರ್ಮಾಣ ಹಂತದಲ್ಲಿರುವ ಮನೆಗಳು ಸಂಪೂರ್ಣವಾಗಿ ಕಳಪೆ ಮಟ್ಟದಲ್ಲಿ ಕೂಡಿದ್ದು, ಮನೆಯ ಪಾಯ ಮತ್ತು ಗೋಡೆಯ ಗುಣಮಟ್ಟವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ನಿರ್ಮಾಣಕ್ಕೆ ಸಂಬಂಧಿಸಿದ ಅಧಿಕಾರಿಗಳ ಮತ್ತು ಗುತ್ತಿಗೆದಾರರ ವಿರುದ್ಧ ಕೈಗೊಂಡ ಕ್ರಮಗಳೇನು;

ಉ) ಸದರಿ ಮನೆಗಳ ನಿರ್ಮಾಣಕ್ಕೆ ಇರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

----

15/4/1155

**ಮನೆಗಳಿಗೆ ಸಿ.ಆರ್**

1117 **ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ವಾಸಿಸುತ್ತಿರುವ ಅನೇಕ ಸಾರ್ವಜನಿಕರ ಮನೆಗಳಿಗೆ Completion Report ಇಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮನೆ ಕಂದಾಯವು 3 ಪಟ್ಟು ಹೆಚ್ಚಾಗಿ ಪಾವತಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳೇನು;

ಈ) ಇಂತಹ ಮಧ್ಯಮ ವರ್ಗದ ಜನರ ಮನೆಗಳಿಗೆ ಸಿ.ಆರ್ (Completion Report) ಕೊಡಲು ಸಾಧ್ಯವಾಗದಿರಲು ಕಾರಣಗಳೇನು;

ಉ) ಸಿ.ಆರ್ ಹೊರತುಪಡಿಸಿ ಮನೆ ಕಂದಾಯವನ್ನು ಶೇಕಡ 50 ರಷ್ಟು ಸರ್ಕಾರದ ವತಿಯಿಂದ ಕಡಿತಗೊಳಿಸಲು ಸಾಧ್ಯವಾಗುವುದಿಲ್ಲವೇ; ಇಲ್ಲವಾದಲ್ಲಿ, ಕಾರಣಗಳೇನು; ಸಾಧ್ಯವಾಗುವುದಾದರೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ (ವಿವರ ನೀಡುವುದು)?

----

15/4/1156

**ಕುಡಿಯುವ ನೀರಿನ ಶುಲ್ಕ**

1118 **ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಕುಡಿಯುವ ನೀರಿನ ಶುಲ್ಕವನ್ನು ಪಾವತಿಸುವಾಗ ಮೂಲ ಶುಲ್ಕಕ್ಕಿಂತ ಬಡ್ಡಿ ದರವೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಆ) ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ಹಿಂದೆ ನಗರ ಪಾಲಿಕಾ ಕೌನ್ಸಿಲ್ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಇ) ಈ ಕುರಿತು ಸರ್ಕಾರದ ನಿರ್ಣಯವೇನು (ಕಾಲಮಿತಿಯ ವಿವರ ನೀಡುವುದು);

ಈ) ಇಂತಹ ಬಡ್ಡಿದರವನ್ನು ಕಡಿತಗೊಳಿಸುವುದರಿಂದ ಸಾರ್ವಜನಿಕರು ಕಾಲಕ್ಕೆ ಸರಿಯಾಗಿ ಕುಡಿಯುವ ನೀರಿನ ಶುಲ್ಕವನ್ನು ಪಾವತಿ ಮಾಡುವುದರ ಜೊತೆಗೆ ನಗರ ಪಾಲಿಕೆಯ ಆದಾಯವು ಸಹ ಹೆಚ್ಚಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

----

15/4/1157

**ಪೊಲೀಸ್ ಠಾಣೆ ಕಟ್ಟಡ**

**1119 ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮೈಸೂರು ನಗರದಲ್ಲಿರುವ ದೇವರಾಜ ಪೊಲೀಸ್ ಠಾಣೆ ಕಟ್ಟಡವು ಕೆ.ಆರ್. ಆಸ್ಪತ್ರೆಯ ಆವರಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪ್ರತ್ಯೇಕವಾಗಿ ಪೊಲೀಸ್ ಠಾಣೆ ಕಟ್ಟಡವನ್ನು ನಿರ್ಮಿಸಲು ಸ್ಥಳವನ್ನು ನಿಗಧಿಪಡಿಸಲಾಗಿದೆಯೇ; (ಸ್ಥಳದ ವಿವರ ನೀಡುವುದು)

ಇ) ಸದರಿ ಕಟ್ಟಡ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ನಿಗಧಿಪಡಿಸಲಾಗಿದೆ? (ವಿವರ ನೀಡುವುದು)

----

15/4/1422

**ಬಸವ ವಸತಿ ಯೋಜನೆ ಮಂಜೂರಾತಿ**

**1120 ಬಿ. ನಾರಾಯಣ್‌ರಾವ್ (ಬಸವಕಲ್ಯಾಣ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ಬಸವ ವಸತಿ ಯೋಜನೆಯಡಿ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; (ವರ್ಷವಾರು ಮಾಹಿತಿ ನೀಡುವುದು)

ಆ) ಸದರಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಮನೆಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ? (ಮಾಹಿತಿ ನೀಡುವುದು)

----

15/4/1423

**ರಸ್ತೆ ನಿರ್ಮಾಣ**

**1121 ಬಿ. ನಾರಾಯಣ್‌ರಾವ್ (ಬಸವಕಲ್ಯಾಣ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201819 ಮತ್ತು 201920ನೇ ಸಾಲಿನಲ್ಲಿ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ

ಲೋಕೋಪಯೋಗಿ ಇಲಾಖೆ ರಸ್ತೆ ನಿರ್ವಹಣೆಗಾಗಿ ಬಿಡುಗಡೆಯಾದ ಒಟ್ಟು ಅನುದಾನವೆಷ್ಟು (ವರ್ಷವಾರು ಮಾಹಿತಿ ನೀಡುವುದು);
ಆ) ಸದರಿ ಅನುದಾನವನ್ನು ಯಾವ ಯಾವ ರಸ್ತೆಗಳ ನಿರ್ವಹಣೆಗೆ ವಿನಿಯೋಗಿಸಲಾಗಿದೆ (ವಿವರ ನೀಡುವುದು);
ಇ) ಸದರಿ ನಿರ್ವಹಣೆಗೆ ಮೀಸಲಿಟ್ಟಿರುವ ಅನುದಾನದಲ್ಲಿ ಎಷ್ಟು ವರ್ಷಗಳ ಹಿಂದೆ ನಿರ್ಮಾಣ ಮಾಡಿರುವ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ; ಅವು ಯಾವುವು (ಮಾಹಿತಿ ನೀಡುವುದು)?

----

15/4/1424

**ಬ್ರಿಡ್ಜ್ ಕಂ ಬ್ಯಾರೇಜ್‌ಗಳು**

1122 **ಬಿ. ನಾರಾಯಣ್‌ರಾವ್ (ಬಸವಕಲ್ಯಾಣ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೀದರ್ ಜಿಲ್ಲೆ, ಬಸವಕಲ್ಯಾಣ ಮತಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಲ್ಲಿ ನಿರ್ಮಾಣಗೊಂಡ ಬ್ರಿಡ್ಜ್‌ಕಂ ಬ್ಯಾರೇಜ್‌ಗಳು ಯಾವುವು; ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ಕಾಮಗಾರಿಗಳ ವಿವರ ವರ್ಷವಾರು ನೀಡುವುದು);
ಆ) ಬ್ರಿಡ್ಜ್‌ಕಂಬ್ಯಾರೇಜ್ ನಿರ್ಮಾಣ ಮಾಡಲು ತಾಂತ್ರಿಕ ಸಲಹಾ ಸಮಿತಿಯಿಂದ ಒಪ್ಪಿಗೆ ಪಡೆದು ಪ್ರಧಾನಮಂತ್ರಿ ಕೃಷಿ ಪಂಚಾಯತಿ ಯೋಜನೆ ವ್ಯಾಪ್ತಿಗೆ ತಂದು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ವಿಳಂಬ ನಿವಾರಿಸಿ ಯೋಜನೆಯನ್ನು ಪ್ರಸ್ತುತ ವರ್ಷದಲ್ಲಿಯೇ ಅನುಷ್ಠಾನ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು)?

----

15/4/1425

**ವಕ್ಫ್ ಬೋರ್ಡ್ ಆಸ್ತಿ**

1123 **ಬಿ. ನಾರಾಯಣ್‌ರಾವ್ (ಬಸವಕಲ್ಯಾಣ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಕ್ಫ್ ಬೋರ್ಡಿಗೆ ಸಂಬಂಧಪಟ್ಟ ಆಸ್ತಿಗಳು ಯಾವುವು;
ಆ) ಅವು ಯಾವ ಯಾವ ಜಾಗದಲ್ಲಿರುತ್ತವೆ (ಮಾಹಿತಿ ನೀಡುವುದು)?

----

15/4/1262

**ಕಟ್ಟಡ ಪರವಾನಗಿ**

1124 **ಚಂದ್ರುಕಾಂತಗೌಡ ಚನ್ನಬಸಪ್ಪಗೌಡ ಪಾಟೀಲ್ (ನರಗುಂದ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ

: -

ಅ) 2016ನೇ ಸಾಲಿನ ಪೂರ್ವದಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಯೋಜನಾ ಇಲಾಖೆಯಿಂದ ಅನುಮೋದನೆಯಾಗದಿರುವ ನಿವೇಶನಗಳಿಗೆ ಕಟ್ಟಡ ಪರವಾನಗಿ ನೀಡಲು ಬರುವುದಿಲ್ಲವೆಂದು ಹಿಂಬರಹವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, 2016 ರ ಪೂರ್ವ ಹಾಗೂ ನಂತರದಲ್ಲಿ ಅರ್ಜಿ ಸಲ್ಲಿಸಿದ ಸಾರ್ವಜನಿಕರಿಗೆ ತಾರತಮ್ಯ ಮಾಡಿದಂತಾಗುವುದಿಲ್ಲವೇ;

ಇ) ವಸತಿ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ನಿವೇಶನಗಳು ಕೂಡ ಇಂತಹ ಬಡಾವಣೆಯಲ್ಲಿದ್ದು, ಫಲಾನುಭವಿಗಳಿಗೆ ಕಟ್ಟಡ ಪರವಾನಿಗೆ ದೊರೆಯದೇ ಇರುವುದರಿಂದ ಇವರುಗಳು ಸಹಾ ವಸತಿ ಯೋಜನೆಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

----

15/4/1333

## ರೈತರ ಮೇಲೆ ದಾಖಲಾಗಿರುವ ಪ್ರಕರಣಗಳು

**1125 ಪಿ ರಾಜೀವ್ (ಕುಡುಚಿ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ರೈತರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ಸರ್ಕಾರವು ಹಿಂದಕ್ಕೆ ಪಡೆದಿದೆಯೇ;

ಆ) ಅಥಣಿ ತಾಲ್ಲೂಕಿನಲ್ಲಿ ರೈತರ ಸಕ್ಕರೆ ಕಾರ್ಖಾನೆಗಳ ವಿರುದ್ಧ ನಡೆಸಿದ ಹೋರಾಟವನ್ನು ಹಿಂಪಡೆಯದಿರಲು ಕಾರಣಗಳೇನು;

ಇ) ಇಲ್ಲಿಯವರೆಗೆ ಯಾವ ಯಾವ ಪ್ರಕರಣಗಳನ್ನು ಹಿಂಪಡೆಯಲಾಗಿದೆ; (ಪ್ರಥಮ ವರ್ತಮಾನ ಪ್ರತಿಗಳನ್ನು ಒದಗಿಸುವುದು)

ಈ) ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಸಶಸ್ತ್ರ ಪೊಲೀಸ್ ತರಬೇತಿ ಶಾಲೆ, ಪೊಲೀಸ್ ಅಕಾಡೆಮಿ ಹಾಗೂ ಪೊಲೀಸ್ ಕಾಲೇಜುಗಳಲ್ಲಿ 'ಡಿ'ಗ್ರೂಪ್/ದರ್hೆಯ ಅನುಯಾಯಿ (Followers) ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಅನುಯಾಯಿಗಳ ಸಂಖ್ಯೆ ಎಷ್ಟು; (ಹೆಸರು, ವಿದ್ಯಾರ್ಹತೆ ಹಾಗೂ ಸೇವೆಗೆ ಸೇರಿಸಿದ ವರ್ಷ ಮಾಹಿತಿ ನೀಡುವುದು)

ಊ) ಹಲವಾರು ವರ್ಷಗಳಿಂದ 'ಡಿ ' ಗ್ರೂಪ್ ಸೇವೆಯ ಅನುಯಾಯಿಗಳಿಗೆ ಮುಂಬಡ್ತಿ ನೀಡದಿರುವುದರಿಂದ ಅವರ ಮನಸ್ಥೈರ್ಯ ಕುಂದುವುದಿಲ್ಲವೇ;

ಋ) ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಯನ್ನು ಮಾಡಲಾಗಿದೆಯೇ; ಮಾಡಿಲ್ಲದಿದ್ದಲ್ಲಿ, ಕಾರಣವೇನು; (ವಿವರ ನೀಡುವುದು)

ಎ) 'ಡಿ ' ಗ್ರೂಪ್ ಅನುಯಾಯಿಗಳಿಗೆ ಸಮಂಜಸವಾದಿ ಮುಂಬಡ್ತಿಗೆ ಅವಕಾಶ ನೀಡಬೇಕೆಂದು ಕೆ.ಎ.ಟಿ. ಆದೇಶ ನೀಡಿದೆಯೇ;

ಏ) ಈ ಕುರಿತಾಗಿ ಸರ್ಕಾರದ ಸುತ್ತೋಲೆಗಳನ್ನು ಹೊರಡಿಸಲಾಗಿದೆಯೇ; ಇವುಗಳನ್ನು ಉಲ್ಲಂಘಿಸಲು ಕಾರಣಗಳೇನು?

----

15/4/1334

## ಖಾಲಿ ಇರುವ ಹುದ್ದೆಗಳು

1126 **ಪಿ ರಾಜೀವ್ (ಕುಡುಚಿ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕುಡಚಿ ಪುರಸಭೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಕುಡಚಿ ಪುರಸಭೆಯಲ್ಲಿ ಕೆಲಸ ಕಾರ್ಯಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಸದರಿ ಪುರಸಭೆಯ ಕೆಲಸ ಕಾರ್ಯಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸದೆ ಅಧಿಕಾರಿಗಳು ಪಲಾಯನಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;
ಈ) ಕುಡಚಿ ಮತಕ್ಷೇತ್ರದ ಪುರಸಭೆಯ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳೆಂದು ಗುರುತಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ;
ಉ) ಜಿಲ್ಲಾಡಳಿತದ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಇಲ್ಲಿಯವರೆಗೆ ಕೊಳಚೆ ಪ್ರದೇಶಗಳನ್ನು ಗುರುತಿಸುವ ಪ್ರಕ್ರಿಯೆ ನಿಧಾನಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ದಿನಗಳಲ್ಲಿ ಕೊಳಚೆ ಪ್ರದೇಶಗಳನ್ನು ಗುರಿತಿಸುವ ಪ್ರಕ್ರಿಯೆಯನ್ನು ಮಾಡಲಾಗುವುದು?

----

**15/4/832**

## ಹೆದ್ದಾರಿ ಮೇಲ್ದರ್ಜೆಗೇರಿಸುವಿಕೆ

1127 **ರಾಜ್‌ಕುಮಾರ್ ಪಾಟೀಲ್ (ಸೇಡಂ ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿಂಚೋಳಿ, ಸೇಡಂ, ಚಿತ್ತಾಪುರ ಮತ್ತು ವಾಡಿಯವರೆಗೆ ಇರುವ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರದಿಂದ ಅನುಮತಿ ಪಡೆಯಲಾಗಿದೆಯೇ; ಪಡೆಯದಿದ್ದಲ್ಲಿ, ಕಾರಣಗಳೇನು (ವಿವರ ನೀಡುವುದು);
ಆ) ಹಾಗಿದ್ದಲ್ಲಿ, ಒಂದು ವೇಳೆ ಕೇಂದ್ರದಿಂದ ಅನುಮತಿ ಪಡೆದಿದ್ದಲ್ಲಿ, ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ (ಸಂಪೂರ್ಣ ಮಾಹಿತಿ ನೀಡುವುದು)?

----

**15/4/1344**

## ಗೃಹರಕ್ಷಕ ಸಿಬ್ಬಂದಿಗಳಿಗೆ ಸೌಲಭ್ಯಗಳು

1128 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದ ಗೃಹರಕ್ಷಕ ದಳದಲ್ಲಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು;
ಆ) ಇವರಿಗೆ ಯಾವ ಯಾವ ಸೌಲಭ್ಯ ನೀಡಲಾಗುತ್ತಿದೆ; (ವಿವರ ಒದಗಿಸುವುದು)
ಇ) ರಾಜ್ಯದಲ್ಲಿ ಗೃಹರಕ್ಷಕ ದಳಗಳ ಘಟಕಗಳು ಹಾಗೂ ಉಪಘಟಕಗಳಲ್ಲಿ ಪ್ರತಿವಾರ ಕಡ್ಡಾಯವಾಗಿ

ಕವಾಯತನ್ನು ನಡೆಸಬೇಕಾಗಿದ್ದು, ಇದಕ್ಕಾಗಿ ಗೃಹರಕ್ಷಕ ದಳಗಳಿಗೆ ಯಾವುದೇ ಸ್ವಂತ ನಿವೇಶನಗಳಾಗಲಿ, ಕಟ್ಟಡಗಳಾಗಲಿ ಇಲ್ಲದೆ ಇರುವುದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)
ಉ) ಪೊಲೀಸ್ ಇಲಾಖೆಯ ನೌಕರರಂತೆಯೇ ಗೃಹರಕ್ಷಕದವರಿಗೂ ಆರೋಗ್ಯ ಭಾಗ್ಯ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಊ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

----

15/4/1345

**ಔರಾದ್ಕರ್ ವರದಿ ಅನುಷ್ಠಾನ**

1129 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಕುಂದುಕೊರತೆ ನಿವಾರಣೆ ಹಾಗೂ ಇಲಾಖೆಯ ಸುಧಾರಣೆಗಳಿಗೆ ಸಂಬಂಧಿಸಿದಂತೆ ಶ್ರೀ ರಾಘವೇಂದ್ರ ಔರಾದ್ಕರ್‌ರವರು ನೀಡಿರುವ ವರದಿಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಆ) ಹಾಗಿದ್ದಲ್ಲಿ, ಸದರಿ ವರದಿಯಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲು ಪ್ರಸ್ತಾಪಿಸಲಾಗಿದೆ; (ವಿವರ ಒದಗಿಸುವುದು)
ಇ) ಈ ವರದಿಯನ್ನು ಯಾವಾಗ ಜಾರಿಗೊಳಿಸಲಾಗುವುದು? (ವಿವರ ಒದಗಿಸುವುದು)

----

15/4/1346

**ಡಿ.ಸಿ.ಬಿ. ರಿಜಿಸ್ಟರ್ ನಿರ್ವಹಣೆ**

1130 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಡಿ.ಸಿ.ಬಿ. (ಡಿಮ್ಯಾಂಡ್, ಕಲೆಕ್ಷನ್, ಬ್ಯಾಲೆನ್ಸ್) ರಿಜಿಸ್ಟರ್ ನಿರ್ವಹಿಸುವುದು ಕಡ್ಡಾಯವೆ; (ಸಂಬಧಿಸಿದ ಸರ್ಕಾರಿ ಆದೇಶದ ಪ್ರತಿ ನೀಡುವುದು)
ಆ) ರಾಜ್ಯದಲ್ಲಿ ಡಿ.ಸಿ.ಬಿ. ರಿಜಿಸ್ಟರ್ ನಿರ್ವಹಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳು ಯಾವುವು; ಡಿ.ಸಿ.ಬಿ. ರಿಜಿಸ್ಟರ್ ನಿರ್ವಹಿಸದೆ ಇರುವ ನಗರ ಸ್ಥಳೀಯ ಸಂಸ್ಥೆಗಳು ಯಾವುವು; (ವಿವರ ನೀಡುವುದು)
ಇ) ಡಿ.ಸಿ.ಬಿ. ರಿಜಿಸ್ಟರ್ ನಿರ್ವಹಿಸದೆ ಇರಲು ಕಾರಣಗಳೇನು;
ಈ) ಡಿ.ಸಿ.ಬಿ. ರಿಜಿಸ್ಟರ್ ನಿರ್ವಹಿಸದೆ ಇದ್ದಲ್ಲಿ, ಆಸ್ತಿ ತೆರಿಗೆ ಕಟ್ಟಿರುವ ಹಾಗೂ ಬಾಕಿ ಇರುವ ಬಗ್ಗೆ ನಿಖರ ಮಾಹಿತಿಯನ್ನು ಕಲೆ ಹಾಕಲು ಪ್ರಸ್ತುತ ಇರುವ ವ್ಯವಸ್ಥೆಗಳೇನು? (ವಿವರ ನೀಡುವುದು)

----

15/4/831

## ದಾವಣಗೆರೆ ಮಹಾನಗರ ಪಾಲಿಕೆಗೆ ಚುನಾವಣೆ

**1131 ಎಸ್.ಎ. ರವೀದ್ರನಾಥ್ (ದಾವಣಗೆರೆ-ಉತ್ತರ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದಾವಣಗೆರೆ ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯತ್ವದ ಅವಧಿ ಮುಕ್ತಾಯಗೊಂಡು ಆಡಳಿತಾಧಿಕಾರಿ ನೇಮಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ,ದಾವಣಗೆರೆ ಮಹಾನಗರ ಪಾಲಿಕೆಯ 41 ವಾರ್ಡ್‌ಗಳನ್ನು 45ಕ್ಕೆ ಹೆಚ್ಚಿಸಲು ಕಾರಣಗಳೇನು (ವಿವರ ನೀಡುವುದು);

ಇ) ಸದರಿ 45 ವಾರ್ಡ್‌ಗಳಿಗೆ ಮೀಸಲಾತಿ ನಿಗಧಿಪಡಿಸಲಾಗಿದೆಯೇ; ಯಾವ ಮಾನದಂಡದ ಮೇಲೆ ಮೀಸಲಾತಿ ನಿಗಧಿಪಡಿಸಲಾಗಿದೆ (ವಿವರ ಒದಗಿಸುವುದು);

ಈ) ಸದರಿ ಪಾಲಿಕೆಯಲ್ಲಿ ಚುನಾಯಿತ ಸದಸ್ಯರಿಲ್ಲದೇ ನಗರ ವ್ಯಾಪ್ತಿಯ ಸಮಸ್ಯೆಗಳನ್ನು ಬಗೆಹರಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಪಾಲಿಕೆಯ ಚುನಾವಣೆ ನಡೆಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು (ವಿವರ ಹಾಗೂ ದಾಖಲೆಗಳನ್ನು ಒದಗಿಸುವುದು);

ಊ) ಈ ಪಾಲಿಕೆಗೆ ಯಾವಾಗ ಚುನಾವಣೆ ನಡೆಸಲಾಗುವುದು?

----

15/4/841

## ಅಪರಾಧ ತಡೆ ಕ್ರಮಗಳು

**1132 ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಗೃಹ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ರಾಜಕೀಯ ದ್ವೇಷದ ಅಪಹರಣಕೊಲೆ ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

ಆ) ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು; ಯಾವ ರಾಜಕೀಯ ಮುಖಂಡರ ಮೇಲೆ ದಾಳಿಯ ಮುನ್ಸೂಚನೆ ದೊರೆತಿದೆ;

ಇ) ರಾಜಕೀಯ ದ್ವೇಷದ ಹಿನ್ನೆಲೆಯ ದಾಳಿಯನ್ನು ತಡೆಗಟ್ಟಲು ಹಾಗೂ ಕೊಲೆ ಸಂಚು ರೂಪಿಸಿದವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ;

ಈ) ಕೊಲೆ ಆರೋಪಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ರಾಜ್ಯದಲ್ಲಿ ನಡೆದಿರುವ ಪ್ರಕರಣಗಳ ವಿವರಗಳನ್ನು ಜಿಲ್ಲಾವಾರು ಮಾಹಿತಿ ಒದಗಿಸುವುದು)

----

15/4/1259

## ಕಾಮಗಾರಿಗಳು

**1133 ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಲೋಕೋಪಯೋಗಿ ಇಲಾಖೆಯಿಂದ ದಿನಾಂಕ:19052018 ರಿಂದ ಇಲ್ಲಿಯವರೆಗೆ ಎಷ್ಟು ಅನುದಾನ ನೀಡಲಾಗಿದೆ (ವಿವರ ನೀಡುವುದು) ಪ್ರಸ್ತುತ ಸರ್ಕಾರ ರಚನೆಯಾದಾಗಿನಿಂದ ಇಲ್ಲಿಯವರೆಗೆ ಪ್ರಾರಂಭವಾದ ಕಾಮಗಾರಿಗಳು ಮತ್ತು ಬಾಕಿ ಇರುವ ಕಾಮಗಾರಿಗಳೆಷ್ಟು; (ಕಾಮಗಾರಿಗಳ ವಿವರ ನೀಡುವುದು)

ಆ) ದಿನಾಂಕ:19.05.2018 ರಿಂದ ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಯಾವ ರಸ್ತೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; (ವಿವರ ನೀಡುವುದು)

ಇ) ಹೊನ್ನಾಳಿ ತಾಲ್ಲೂಕು ಬಸವಪಟ್ಟಣಹೊನ್ನಾಳಿನ್ಯಾಮತಿಸವಳಂಗ ರಸ್ತೆಯ ಕಾಮಗಾರಿಯು ಪೂರ್ಣಗೊಳಿಸದೆ ಮತ್ತು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕಾಮಗಾರಿಯು 131 ಕೋಟಿ ರೂ. ವೆಚ್ಚದಲ್ಲಿ ಡಿ.ಆರ್.ಎನ್. ಇನ್‌ಫ್ರಾಸ್ಟ್ರಕ್ಚರ್ ಕಂಪನಿಯವರು ಗುತ್ತಿಗೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸದೆ ಕಳಪೆ ಕೆಲಸವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಂಪನಿಯ ವಿರುದ್ಧ ಹಾಗೂ ಅಧಿಕಾರಿಗಳ ವಿರುದ್ಧ ಕೈಗೊಂಡಕ್ರಮಗಳೇನು; (ವಿವರ ನೀಡುವುದು)

ಉ) ಈ ಬಗ್ಗೆ ದಿನಾಂಕ: 04012019 ರಂದು ಮನವಿ ಮಾಡಿದ್ದರೂ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣವೇನು; ಕಂಪನಿಯ ವಿರುದ್ಧ ಇದುವರೆಗೂ ಕ್ರಮ ಕೈಗೊಳ್ಳದೆ ಇರುವುದಕ್ಕೆ ತೊಂದರೆಗಳೇನು; (ವಿವರ ನೀಡುವುದು)

ಊ) ದಾವಣಗೆರೆ ಜಿಲ್ಲೆ ಹೊನ್ನಾಳಿ ನಗರದ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಿರುವ ಕಾಮಗಾರಿಯು ಸಂಪೂರ್ಣ ಕಳಪೆಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು; (ವಿವರ ನೀಡುವುದು)

ಋ) ದಾವಣಗೆರೆ ಜಿಲ್ಲೆ ಹೊನ್ನಾಳಿ ನಗರದ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಿರುವ ಕಾಮಗಾರಿಯು ಸಂಪೂರ್ಣ ಕಳಪೆ ಮಟ್ಟದಿಂದ ಕೂಡಿರುವುದರಿಂದ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ದಿನಾಂಕ: 04012019 ರಂದು ಮನವಿ ಸಲ್ಲಿಸಿದ್ದರು, ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? (ಸಂಪೂರ್ಣ ವಿವರ ನೀಡುವುದು)

----

15/4/1260

**ವಕ್ಫ್ ಅನುದಾನ**

**1134 ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಹೊನ್ನಾಳಿ ತಾಲ್ಲೂಕಿಗೆ ದಿನಾಂಕ 1952019 ರಿಂದ ಇಲ್ಲಿಯವರೆಗೆ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಇಲಾಖೆಯಿಂದ ಎಷ್ಟು ಅನುದಾನ ನೀಡಲಾಗಿದೆ; (ವಿವರ ನೀಡುವುದು)

ಆ) ಹೊನ್ನಾಳಿ ತಾಲ್ಲೂಕಿನ ವಕ್ಫ್ ಇಲಾಖೆಯಿಂದ ಯಾವ ಯಾವ ಮಸೀದಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ; (ವಿವರ ನೀಡುವುದು)

ಇ) ಹೊನ್ನಾಳಿ ತಾಲ್ಲೂಕಿನ ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಯುತ್ತಿರುವ ವಸತಿ ನಿಲಯಗಳೆಷ್ಟು; (ವಿವರ ನೀಡುವುದು)

ಈ) ಹೊಸ ಅಲ್ಪಸಂಖ್ಯಾತರ ವಸತಿ ಶಾಲೆಯನ್ನು ನೀಡುವ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)

ಉ) ಹೊನ್ನಾಳಿ ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ಅಲ್ಪಸಂಖ್ಯಾತರ ಇಲಾಖೆಯಿಂದ ಬಾಕ್ಸ್ ಚರಂಡಿ

ಹಾಗೂ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ? (ವಿವರ ನೀಡುವುದು)

----

15/4/1170

**ಆಶ್ರಯ ವಸತಿ ನಿವೇಶನಗಳ ಅಭಿವೃದ್ಧಿ**

1135 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬಂಗಾರಪೇಟೆ ಪುರಸಭೆ ವ್ಯಾಪ್ತಿಯಲ್ಲಿ ವಾಸ ಮಾಡುವ ನಿವೇಶನರಹಿತರು ಹಾಗೂ ವಸತಿ ರಹಿತರಿಗೆ ನಿವೇಶನಗಳನ್ನು ಮಂಜೂರು ಮಾಡಲು ಕಾಯ್ದಿರಿಸಲಾದ ಜಮೀನಿನಲ್ಲಿ ನಿವೇಶನಗಳನ್ನು ಸಿದ್ಧ ಪಡಿಸಲು ಅನುದಾನ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ನಿವೇಶನ ರಹಿತ ಫಲಾನುಭವಿಗಳಿಗೆ ವಿತರಿಸಲು ಎಷ್ಟು ವರ್ಷಗಳ ಕಾಲಾವಧಿ ನಿಗಧಿಪಡಿಸಲಾಗಿದೆ;

ಇ) ಅಗತ್ಯ ಹಣ ಬಿಡುಗಡೆ ಮಾಡದಿರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಹಣ ಮಂಜೂರು ಮಾಡಲಾಗುವುದು; (ವಿವರ ನೀಡುವುದು)

ಈ) ಆಶ್ರಯ ವಸತಿ ಯೋಜನೆಯಡಿ ಬಡಾವಣೆ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುವುದೇ;

ಉ) ಭರಿಸಿದ್ದಲ್ಲಿ ಪ್ರತಿ ಎಕರೆ/ನಿವೇಶನಕ್ಕೆ ನಿಗಧಿಪಡಿಸಿದ ಅಂದಾಜು ಹಣ ಎಷ್ಟು? (ಮಾಹಿತಿ ನೀಡುವುದು)

----

15/4/1171

**ಕೇಶಿಪ್ ಯೋಜನೆ**

1136 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಕೋಲಾರ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಿದ ರಾಜ್ಯ ಹೆದ್ದಾರಿ ರಸ್ತೆಗಳು ಯಾವುವು;

ಆ) ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಕಿಲೋಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ; (ವಿವರಗಳನ್ನು ನೀಡುವುದು)

ಇ) 201920ನೇ ಸಾಲಿಗೆ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳು ಯಾವುವು; ಎಷ್ಟು ಕಿಲೋಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು; (ವಿವರ ನೀಡುವುದು)

ಈ) ಬಂಗಾರಪೇಟೆ ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸಲು ನೀಡಲಾಗಿದ್ದ ರಾಜ್ಯ ಹೆದ್ದಾರಿಯ ಯೋಜನೆಗಳ ಪ್ರಸ್ತಾವನೆಗಳನ್ನು 201920ನೇ ಸಾಲಿಗೆ ಅಳವಡಿಸಿಕೊಳ್ಳಲಾಗುವುದೇ? (ವಿವರ ನೀಡುವುದು)

----

15/4/1419

**ಪಡಿತರ ಚೀಟಿ ವಿತರಣೆ**

1137 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ನೀಡಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;
ಆ) ಆಧಾರ್ ಲಿಂಕ್ ಮುಖಾಂತರ ಹಾಲಿ ಇದ್ದ ಎಷ್ಟು ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ;(ವಿವರ ನೀಡುವುದು)
ಇ) ಅವಿಭಕ್ತ ಕುಟುಂಬಗಳಿಂದ ಬೇರೆಯಾಗಿ ಹೊಸದಾಗಿ ಪಡಿತರ ಚೀಟಿಗಳನ್ನು ಪಡೆಯಲು ಸ್ವೀಕರಿಸಲಾದ ಅರ್ಜಿಗಳು ಎಷ್ಟು;
ಈ) ವಿತರಿಸಲಾದ ಪಡಿತರ ಚೀಟಿಗಳು ಎಷ್ಟು?

----

15/4/1165

## ಟಿ.ಡಿ.ಆರ್ ವಿತರಣೆ

1138 **ಸತೀಶ್ ರೆಡ್ಡಿ ಎಂ. (ಬೊಮ್ಮನಹಳ್ಳಿ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬನ್ನೇರುಘಟ್ಟ ರಸ್ತೆಯ ಅಗಲೀಕರಣಕ್ಕಾಗಿ ಪಡೆಯುವ ಜಾಗಕ್ಕೆ ಮೆಟ್ರೋ ಸಂಸ್ಥೆಯವರು ಒಂದು ಚದರ ಅಡಿಗೆ ಸುಮಾರು 22 ಸಾವಿರ ನಿಗಧಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, 150 ಅಡಿ ರಸ್ತೆಯ ವಿಸ್ತರಣೆಗೆ ಮೆಟ್ರೋ ಸಂಸ್ಥೆಯವರು ಅರ್ಧ ಹಣವನ್ನು; ಉಳಿದರ್ಧ ಹಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಕ ಟಿ.ಡಿ.ಆರ್ ವಿತರಿಸುವುದಕ್ಕೆ ಯೋಜನೆ ರೂಪಿಸಿರುವುದು ನಿಜವೇ;
ಇ) ಹಾಗಿದ್ದಲ್ಲಿ, ಈ ಯೋಜನೆಯಡಿ ಒಂದು ಚದರ ಅಡಿಯ ಟಿ.ಡಿ.ಆರ್ ಮಾರುಕಟ್ಟೆ ದರ ಎಷ್ಟು? (ವಿವರ ನೀಡುವುದು)

----

15/4/1166

## ರಸ್ತೆ ಅಗಲೀಕರಣ

1139 **ಸತೀಶ್ ರೆಡ್ಡಿ ಎಂ. (ಬೊಮ್ಮನಹಳ್ಳಿ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬನ್ನೇರುಘಟ್ಟ ರಸ್ತೆ ಬೇಗೂರು ರಸ್ತೆ ಮತ್ತು ಸರ್ಜಾಪುರ ರಸ್ತೆಗಳ ಅಗಲೀಕರಣ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ; ಮುಕ್ತಾಯಕ್ಕೆ ಹಾಕಿಕೊಂಡಿರುವ ಕಾಲಮಿತಿ ಏನು (ವಿವರ ನೀಡುವುದು);
ಅ) ರೈತರು ಮತ್ತು ಮನೆ ಮಾಲೀಕರು ತಮ್ಮ ಜಾಗವನ್ನು ಟಿ.ಡಿ.ಆರ್ ಯೋಜನೆಯಡಿ ಬಿಟ್ಟುಕೊಡಲು ಆಸಕ್ತಿ ತೋರದ ಕಾರಣ ರಸ್ತೆ ಕಾಮಗಾರಿ ಸಮರ್ಪಕವಾಗಿ ಆಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡ ಕ್ರಮಗಳೇನು;
ಈ) ಟಿ.ಡಿ.ಆರ್ ನೀಡುವುದಕ್ಕೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? (ವಿವರ ನೀಡುವುದು)

----

15/4/1167

## ಕೆರೆ ಅಭಿವೃದ್ಧಿ

1140 **ಸತೀಶ್ ರೆಡ್ಡಿ ಎಂ. (ಬೊಮ್ಮನಹಳ್ಳಿ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಅರಕೆರೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿರುವುದು ನಿಜವೇ;
ಆ) ಹಾಗಿದ್ದಲ್ಲಿ, ಕೆರೆ ಅಭಿವೃದ್ಧಿಯ ಅಂದಾಜು ವೆಚ್ಚ ಎಷ್ಟು; ಬಿಡುಗಡೆಯಾಗಿರುವ ಮತ್ತು ಈವರೆಗೆ ಖರ್ಚು ಮಾಡಿರುವ ಹಣ ಎಷ್ಟು (ವಿವರ ನೀಡುವುದು);
ಇ) ಸದರಿ ಕಾಮಗಾರಿಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾಮಗಾರಿ ನಿಲ್ಲಿಸಿರುವುದಕ್ಕೆ ಕಾರಣಗಳೇನು (ವಿವರ ನೀಡುವುದು);
ಈ) ಅರೆಕೆರೆಯು ಪುರಾತನ ಕೆರೆಯಾಗಿದ್ದು, ಕೆರೆಯ ಸುತ್ತಮುತ್ತಲಿನ ಪ್ರದೇಶಗಳಿಂದ ಕಲುಷಿತ ಮತ್ತು ತ್ಯಾಜ್ಯ ನೀರು ಕೆರೆಗೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಹಾಗಿದ್ದಲ್ಲಿ, ಇದನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು
ಊ) ಕೆಲವು ರಿಯಲ್ ಎಸ್ಟೇಟ್ ಮಾಫಿಯಾಗಳು ಕೆರೆಯ ಮೇಲೆ ಹಕ್ಕು ಸಾಧಿಸಲು ನ್ಯಾಯಾಲಯಕ್ಕೆ ತಪ್ಪು ದಾಖಲೆಗಳನ್ನು ನೀಡಿ, ಕೆರೆಯನ್ನು ಕಬಳಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಋ)ಹಾಗಿದ್ದಲ್ಲಿ, ಕೆರೆಯ ಕಬಳಿಕೆಯ ಯತ್ನವನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

----

15/4/825

## ಸೇತುವೆ ನಿರ್ಮಾಣ

1141 **ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ (ನವಲಗುಂದ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ನವಲಗುಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರಕೋಳದಿಂದ ಹನಸಿಗೆ ಹೋಗುವ ರಸ್ತೆ ಮಧ್ಯದಲ್ಲಿ ಹೊಸದಾಗಿ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಆ) ಹಾಗಿದ್ದಲ್ಲಿ ಯಾವಾಗ ಸೇತುವೆ ನಿರ್ಮಾಣ ಮಾಡಲು ಅನುದಾನ ಮಂಜೂರು ಮಾಡಲಾಗುವುದು?
(ಸಂಪೂರ್ಣ ವಿವರ ನೀಡುವುದು)

----

15/4/1261

## ಅನಧಿಕೃತ ಸಂಪರ್ಕಗಳು

1142 **ಕೆ ಶಿವನಗೌಡ ನಾಯಕ್ (ದೇವದುರ್ಗ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೇಗೂರು ವಾರ್ಡಿನ ರಾಘವೇಂದ್ರ ಬಡಾವಣೆ, ಮೈಕೋ

ಬಡಾವಣೆಗಳಲ್ಲಿರುವ ಮನೆಗಳ ಸಂಖ್ಯೆ ಎಷ್ಟು;
ಆ) ಅವುಗಳಲ್ಲಿ ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯಿಂದ ಅಧಿಕೃತವಾಗಿ ಎಷ್ಟು ಮನೆಗಳಿಗೆ ಮೀಟರ್ ಅಳವಡಿಸಿ ಕಾವೇರಿ ನೀರು ಪೂರೈಕೆ ಮಾಡಲಾಗುತ್ತಿದೆ; ಅವುಗಳಲ್ಲಿ ಮೀಟರ್ ಸಂಪರ್ಕವಿಲ್ಲದೆ ನೀರು ಪೂರೈಕೆಯಾಗುತ್ತಿರುವ ಮನೆಗಳೆಷ್ಟು (ಅಧಿಕೃತ ಹಾಗೂ ಅನಧಿಕೃತ ಸಂಪರ್ಕದಾರರ ಹೆಸರು ಪ್ರತ್ಯೇಕವಾಗಿ ತಿಳಿಸುವುದು);
ಇ) ಬೆಂಗಳೂರು ನಗರ ನೀರು ಸರಬರಾಜು ಮಂಡಳಿಗೆ ಅಧಿಕೃತ ಸಂಪರ್ಕದಾರರಿಂದ ಪ್ರತಿ ತಿಂಗಳು ಬರುವ ಆದಾಯವೆಷ್ಟು; ಅನಧಿಕೃತ ಸಂಪರ್ಕ ಹೊಂದಿ ನೀರು ಬಳಕೆ ಮಾಡುತ್ತಿರುವುದರಿಂದ ಮಂಡಳಿಗೆ ಆಗುತ್ತಿರುವ ನಷ್ಟವೆಷ್ಟು; ಈ ಬಗ್ಗೆ ಯಾವ ಕಠಿಣ ಕ್ರಮ ಕೈಗೊಳ್ಳಲಾಗುವುದು;
ಈ) ಅನಧಿಕೃತ ಸಂಪರ್ಕ ತೆರವುಗೊಳಿಸುವ ಮತ್ತು ಅಂತಹವರ ಮೇಲೆ ಮಂಡಳಿಯಿಂದ ಕೈಗೊಳ್ಳುವ ಕ್ರಮವೇನು; ಇದುವರೆಗೂ ಸದರಿ ಬಡಾವಣೆಗಳಲ್ಲಿರುವ ಎಷ್ಟು ಮಾಲೀಕರ ಮೇಲೆ ಕ್ರಮ ಕೈಗೊಳ್ಳಲಾಗಿದೆ; (ವಿವರ ಒದಗಿಸುವುದು)
ಉ) ಅನಧಿಕೃತ ಸಂಪರ್ಕ ಹೊಂದಿರುವುದು ತಿಳಿದು ಬಂದಿದ್ದರೂ ಸಹ ಇದುವರೆಗೂ ಕ್ರಮ ಕೈಗೊಳ್ಳುವಲ್ಲಿ ಆಗಿರುವ ವಿಳಂಬಕ್ಕೆ ಕಾರಣವೇನು; ಈ ಬಗ್ಗೆ ಮಂಡಳಿಯ ನಿರ್ಧಾರವೇನು? (ವಿವರ ನೀಡುವುದು)

----

**15/4/1329**

**ನೀರಿನ ಪೈಪ್‌ಲೈನ್ ದುರಸ್ಥಿ**

**1143 ಶಿವಣ್ಣ ಬಿ. (ಆನೇಕಲ್):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಆನೇಕಲ್ ಪುರಸಭೆಯ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್ ವ್ಯವಸ್ಥಿತವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ಮಾಹಿತಿ ನೀಡುವುದು);
ಆ) ಬಂದಿದ್ದಲ್ಲಿ, ಒಡೆದು ಹೋಗಿರುವ ಪೈಪ್‌ಲೈನ್ ದುರಸ್ಥಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು; (ಮಾಹಿತಿ ನೀಡುವುದು)

----

**15/4/1330**

**ಮೆಟ್ರೋ ರೈಲು ಸೇವೆ ವಿಸ್ತರಣೆ**

**1144 ಶಿವಣ್ಣ ಬಿ. (ಆನೇಕಲ್):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ನಾರಾಯಣ ಹೃದಯಾಲಯದಿಂದ ಅತ್ತಿಬೆಲೆವರೆಗೆ ಮೆಟ್ರೋ ರೈಲು ಸೇವೆ ವಿಸ್ತರಿಸಬೇಕಾದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)
ಆ) ಬಂದಿದ್ದಲ್ಲಿ, ಮೆಟ್ರೋ ರೈಲು ಸೇವೆ ವಿಸ್ತರಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಕೈಗೊಂಡ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

----

**15/4/1331**

## ಕಾವೇರಿ ಕುಡಿಯುವ ನೀರಿನ ವ್ಯವಸ್ಥೆ

**1145 ಶಿವಣ್ಣ ಬಿ. (ಆನೇಕಲ್):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಎಲ್ಲಾ ಹೋಬಳಿಗಳ ಗ್ರಾಮಗಳು ಹಾಗೂ ಸ್ಥಳೀಯ ನಗರಸಂಸ್ಥೆ (ULBS) ಗಳ ವ್ಯಾಪ್ತಿಗೆ ಕಾವೇರಿ ಕುಡಿಯುವ ನೀರಿನ ಸರಬರಾಜು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿರುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು)

----

15/4/823

## ಬಡವರಿಗಾಗಿ ಸೂರು ಯೋಜನೆ

**1146 ವಿ. ಸೋಮಣ್ಣ (ಗೋವಿಂದರಾಜನಗರ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಂಗಳೂರಿನ 4 ಭಾಗದಲ್ಲಿ ಬಡವರಿಗಾಗಿ ರೂಪಿಸಿರುವ ಸೂರು ಯೋಜನೆ ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಸ್ಥಳ ನಿಗಧಿ ಮಾಡಲಾಗಿದೆಯೇ; ಎಷ್ಟು ಪ್ರಮಾಣದ ಸ್ಥಳ ಗುರುತಿಸಲಾಗಿದೆ; ಮಾಡಿದ್ದಲ್ಲಿ ಎಲ್ಲಿ ಮಾಡಲಾಗಿದೆ; (ಮಾಹಿತಿ ನೀಡುವುದು)

ಇ) ಬಡವರಿಗೆ ಮನೆಗಳನ್ನು ಹಂಚಲಾಗಿದೆಯೇ, (ಮಾಹಿತಿ ನೀಡುವುದು)

ಈ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮನೆ ನಿರ್ಮಾಣ ಮಾಡಲು ರಾಜ್ಯಕ್ಕೆ ಬಿಡುಗಡೆಯಾದ ಹಣವೇಷ್ಟು?

----

15/4/1140

## ಕೆರೆಗಳ ನೀರು ಮಾಲಿನ್ಯ ಮತ್ತು ಸಂರಕ್ಷಣೆ

**1147 ವಿ. ಸೋಮಣ್ಣ (ಗೋವಿಂದರಾಜನಗರ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಅವುಗಳ ವಿಸ್ತೀರ್ಣ ಎಷ್ಟು; ಪ್ರಸ್ತುತ ಅವು ಯಾವ ಸ್ಥಿತಿಯಲ್ಲಿವೆ;

ಆ) ನಾಯಂಡಹಳ್ಳಿ ವಾರ್ಡ್131 ರ ವ್ಯಾಪ್ತಿಯಲ್ಲಿರುವ ನಾಯಂಡಹಳ್ಳಿ ಕೆರೆಗೆ ಕೊಳಚೆ ನೀರು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಕೆರೆಗೆ ಕೊಳಚೆ ನೀರು ಸೇರುವುದನ್ನು ತಪ್ಪಿಸಿ ಪುನರುಜ್ಜೀವನಗೊಳಿಸಲು ಮತ್ತು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಕಾವೇರಿಪುರ ವಾಡ್103 ರ ವ್ಯಾಪ್ತಿಯಲ್ಲಿ "ಬಾಳಯ್ಯನಕೆರೆ" ಉದ್ಯಾನದೊಳಗಿರುವ ಕೆರೆಗೆ ನೀರನ್ನು

ತುಂಬಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬಾಳಯ್ಯನ ಕೆರೆಗೆ ನೀರನ್ನು ತುಂಬಿಸುವ ಮೂಲಕ ಸುತ್ತಮುತ್ತಲಿನ ಪ್ರದೇಶಗಳ ಅಂತರ್ಜಲ ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

----

15/4/808

**ವಸತಿ ಯೋಜನೆ**

**1148 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾಗಿ ಅನುಮೋದನೆಯಾಗಿ ಮನೆ ನಿರ್ಮಿಸುತ್ತಿರುವ ಫಲಾನುಭವಿಗಳಿಗೆ ವಿವಿಧ ಹಂತದ ಕಂತಿನ ಹಣ ಸರಿಯಾಗಿ ಪಾವತಿಯಾಗದೆ ವರ್ಷಾನುಗಟ್ಟಲೆ ವಿಳಂಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಹಣ ಪಾವತಿಯಾಗದೇ ಇರುವ ಮನೆಗಳು ಎಷ್ಟು; ಈ ಕುರಿತು ಕೈಗೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿಯನ್ನು ನೀಡುವುದು)

ಇ) ವಿಶೇಷ ವರ್ಗಗಳಾದ ಅಲೆಮಾರಿ, ಅರೆಅಲೆಮಾರಿ, ವಿಕಲಚೇತನ ಹಾಗೂ ಇತರೆ ಹಿಂದುಳಿದ ವರ್ಗಗಳ ವಸತಿ ರಹಿತರನ್ನು ಗುರುತಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ವರ್ಗಗಳ ಎಷ್ಟು ವಸತಿ ರಹಿತರನ್ನು ಗುರುತಿಸಲಾಗಿದೆ; ಇವರಿಗೆ ವಸತಿ ನೀಡಲು ಕೈಗೊಂಡಿರುವ ಕ್ರಮಗಳೇನು; (ವಿವರವಾದ ವರದಿಯನ್ನು ನೀಡುವುದು)

ಉ) ಹಿಂದಿನ ಸರ್ಕಾರದಲ್ಲಿ ಪ.ಜಾತಿ ಮತ್ತು ಪ.ಪಂಗಡದ ವಸತಿ ರಹಿತರಿಗೆ ಎಲ್ಲರಿಗೂ ಸೂರು ನೀಡುವ ಯೋಜನೆ ಪ್ರಕಟಿಸಲಾಗಿದ್ದು ಅದರಂತೆ ರಾಜ್ಯಾದ್ಯಂತಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಎಸ್.ಸಿಎಸ್.ಟಿ ವಸತಿ ರಹಿತ ಕುಟುಂಬಗಳನ್ನು ಗುರುತಿಸಿ ಗಣಕಯಂತ್ರದಲ್ಲಿ ಇಂಡೀಕರಿಸಲು ಸೂಚಿಸಲಾಗಿದ್ದು ಕಾರ್ಯವಾಗಿದೆಯೇ

ಊ) ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಎಸ್.ಸಿ ಎಸ್.ಟಿ ವಸತಿ ರಹಿತ ಕುಟುಂಬಗಳನ್ನು ಗುರುತಿಸಲಾಗಿದೆ ಹಾಗೂ ಸದರಿ ವರ್ಗದ ಕುಟುಂಬದವರಿಗೆ ಎಷ್ಟು ಮನೆಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ;( ವಿವರ ನೀಡುವುದು)

ಋ) ಗ್ರಾಮೀಣ ಪ್ರದೇಶದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಮಂಜೂರು ಮಾಡುವ ಸಲುವಾಗಿ ಗುರುತಿಸಿರುವ ಜಮೀನಿನಲ್ಲಿ ಬಡಾವಣೆ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳು ಒದಗಿಸಲಾಗುವುದೇ;

ಎ) ಹಾಗಿದ್ದಲ್ಲಿ ಸದರಿ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಳ್ಳಲು ಸರ್ಕಾರದಿಂದ ದೊರೆಯುವ ಅನುದಾನ ಹಾಗೂ ಅದರ ವಿನಿಯೋಗ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು)?

----

15/4/809

**ರಸ್ತೆಗಳ ಅಭಿವೃದ್ಧಿ**

**1149 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಷ್ಟ್ರೀಯ ಹೆದ್ದಾರಿ 234ರ ಚಿಕ್ಕಬಳ್ಳಾಪುರಮಂಚೇನಹಳ್ಳಿ ರಸ್ತೆಗೆ ಸಂಬಂಧಿಸಿದಂತೆ ಆಯ್ಕೆಯಾಗಿರುವ ಗುತ್ತಿಗೆದಾರರು ಯಾರು; ಇದಕ್ಕಾಗಿ ಒದಗಿಸಿರುವ ಅನುದಾನ ಎಷ್ಟು;
ಆ) ರಸ್ತೆಯ ಅಭಿವೃದ್ಧಿಗೆ ಯಾವಾಗ ಟೆಂಡರ್ ಕರೆಯಲಾಗಿರುತ್ತದೆ; ಸದರಿ ಕಾಮಗಾರಿ ಪೂರ್ಣಗೊಳಿಸಲು ನೀಡಿದ ಕಾಲಾವಧಿ ಎಷ್ಟು;
ಇ) ಈ ರಸ್ತೆ ಅಭಿವೃದ್ಧಿಯನ್ನು ನಿರ್ವಹಿಸಿದ ಕಾಮಗಾರಿಗೆ ಗುತ್ತಿಗೆದಾರರಿಗೆ ಎಷ್ಟು ಹಣವನ್ನು ಪಾವತಿಸಲಾಗಿರುತ್ತದೆ ಹಾಗೂ ಎಷ್ಟು ಬಾಕಿಯಿರುತ್ತದೆ; (ವಿವರ ನೀಡುವುದು)
ಈ) ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸದೇ ಸ್ಥಗಿತಗೊಳಿಸಿರುವುದಕ್ಕೆ ಕಾರಣಗಳೇನು; ಈ ಕುರಿತು ಗುತ್ತಿಗೆದಾರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು, ಬಾಕಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು) ?

----

15/4/1158

**ಸೇತುವೆ ಕಾಮಗಾರಿ**

1150 **ಸುನಿಲ್ ಬಿಳಿಯ ನಾಯಕ್ (ಭಟ್ಕಳ):**

ಮಾನ್ಯ **ಲೋಕೋಪಯೋಗಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಭಟ್ಕಳಹೊನ್ನಾವರ ವಿಧಾನಸಭಾ ಕ್ಷೇತ್ರದ ಹೊನ್ನಾವರ ತಾಲ್ಲೂಕಿನ ಮಾವಿನಕುರ್ವಾ ಸೇತುವೆಯು 201718ರಲ್ಲಿ ಮಂಜೂರು ಮಾಡಿದ್ದರೂ ಸಹ ಈವರೆಗೂ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕಿದೆಯೇ;
ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು)
ಇ) ಕಾಮಗಾರಿ ಪ್ರಾರಂಭಿಸಲು ಕೈಗೊಂಡ ಕ್ರಮಗಳೇನು?

----

15/4/1342

**ವಸತಿ ಯೋಜನೆಗಳು**

1151 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಸತಿ ಯೋಜನೆಗಳಾವುವು; (ವಿವರ ನೀಡುವುದು)
ಆ) ರಾಜ್ಯದಲ್ಲಿ ವಸತಿ ಮತ್ತು ನಿವೇಶನ ರಹಿತ ಬಿಪಿಎಲ್ ಮತ್ತು ಮಧ್ಯಮ ವರ್ಗದ ಜನರಿಗೆ ಸೌಲಭ್ಯ ಒದಗಿಸಿಕೊಡಲು ಮಂಡಳಿಯ ಮುಂದಿರುವ ಪ್ರಸ್ತಾವನೆಗಳು ಯಾವುವು;
ಇ) ಸದರಿ ಮಂಡಳಿಯ ಕಾರ್ಯವ್ಯಾಪ್ತಿಯನ್ನು ಗ್ರಾಮಾಂತರಗಳಿಗೂ ವಿಸ್ತರಿಸುವ ಕುರಿತು ಯೋಜನೆ ರೂಪಿಸಲಾಗಿದೆಯೇ;
ಈ) ಮುಲ್ಕಿ/ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಸತಿ/ನಿವೇಶನ ಸಮಸ್ಯೆಯನ್ನು ಬಗೆಹರಿಸುವ ದಿಸೆಯಲ್ಲಿ ಲಭ್ಯವಿರುವ ಸರ್ಕಾರಿ ಜಮೀನುಗಳನ್ನು ಉಪಯೋಗಿಸಿಕೊಂಡು ಅರ್ಹ ಫಲಾನುಭವಿಗಳಿಗೆ ವಸತಿ/

ನಿವೇಶನಗಳನ್ನು ನೀಡಲಾಗುವುದೇ? (ವಿವರ ನೀಡುವುದು)

----

15/4/1343

**ಸ್ತ್ರೀ ಸುರಕ್ಷಾ ಯೋಜನೆ**

**1152 ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಉಪ ಮುಖ್ಯಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಂಗಳೂರು ಮಹಾನಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸ್ತ್ರೀ ಸುರಕ್ಷಾ ನಗರ ಯೋಜನೆ ಮತ್ತು ಅನುಷ್ಠಾನ ಕುರಿತ ವಿವರಗಳು ಯಾವುವು;
ಆ) ಸದರಿ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಘೋಷಿಸಿರುವ ಅನುದಾನದ ಮೊತ್ತ ಎಷ್ಟು ಯೋಜನೆಯ ಜಾರಿಗೆ ನಿರ್ದೇಶನ ಮತ್ತು ಮಾರ್ಗಸೂಚಿಗಳಾವುವು; (ವಿವರ ನೀಡುವುದು)
ಇ) ಸದರಿ ಯೋಜನೆಯಡಿಯಲ್ಲಿ ಬರುವ ಸ್ತ್ರೀ ಸುರಕ್ಷಾ ನಗರ ಕಾರ್ಯಕ್ರಮಗಳಾವುವು? (ವಿವರ ನೀಡುವುದು)

----

15/4/1451

**ಪಡಿತರ ಪೂರೈಕೆ**

**1153 ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪಡಿತರ ಪೂರೈಕೆ ವ್ಯವಸ್ಥೆ ಪಡೆಯುತ್ತಿರುವ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ದಾರರ ಸಂಖ್ಯೆ ಎಷ್ಟು ;(ಹೆಸರು ಸಮೇತ ತಾಲ್ಲೂಕುವಾರು ಸಂಖ್ಯಾ ವಿವರ ನೀಡುವುದು)
ಆ) ಪ್ರಸಕ್ತ ಸಾಲಿನಲ್ಲಿ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಕಾರ್ಡ್‌ಗಳನ್ನು ಪಡೆದಿರುವ ಮತ್ತು ಬಾಕಿ ಇರುವವರ ಸಂಖ್ಯೆ ಎಷ್ಟು)
ಇ) ಬಿಪಿಎಲ್ ಕಾರ್ಡ್ ನೀಡಿಕೆ ಕುರಿತು ಪ್ರಸ್ತುತ ಅನುಸರಿಸುತ್ತಿರುವ ಮಾನದಂಡಗಳು ಯಾವುವು? (ವಿವರ ನೀಡುವುದು)

----

15/4/1142

**ಒಳಚರಂಡಿ ನಿರ್ಮಾಣ**

**1154 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೇಂದ್ರ ಸರ್ಕಾರ ಪ್ರಾಯೋಜಿತ UIDSSMT ಅಡಿಯಲ್ಲಿ ಸಂಕೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆಯೇ;
ಆ) ಹಾಗಿದ್ದಲ್ಲಿ, ಈ ಮೊದಲು ಯಾವಾಗ ಅನುಮೋದನೆ ನೀಡಲಾಗಿತ್ತು ಮತ್ತು ಎಷ್ಟು ಅನುದಾನಕ್ಕೆ

ಅನುಮೋದನೆ ನೀಡಲಾಗಿತ್ತು (ವಿವರ ನೀಡುವುದು);

ಇ) ಸಂಕೇಶ್ವರ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯ ಕಾಮಗಾರಿಗೆ 201920ನೇ ಸಾಲಿನ ದರಪಟ್ಟಿ ಪ್ರಕಾರ ರೂ.96.60 ಕೋಟಿ ಮೊತ್ತದ ಪರಿಷ್ಕೃತ ಅಂದಾಜು ತಯಾರಿಸಿ, ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪರಿಷ್ಕೃತ ಅಂದಾಜಿನ ಯೋಜನೆಗೆ ಯಾವಾಗ ಅನುಮೋದನೆ ನೀಡಲಾಗುವುದು (ವಿವರ ನೀಡುವುದು);

ಈ) ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹಾಕಿಕೊಂಡ ಕಾಲಮಿತಿಯೇನು?

----

15/4/1143

**ಒಳಚರಂಡಿ ನಿರ್ಮಾಣ**

**1155** **():**

ಮಾನ್ಯ **ನಗರಾಭಿವೃದ್ಧಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕೇಂದ್ರ ಸರ್ಕಾರ ಪ್ರಾಯೋಜಿತ UIDSSMT ಅಡಿಯಲ್ಲಿ ಹುಕ್ಕೇರಿ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಮೊದಲು ಯಾವಾಗ ಅನುಮೋದನೆ ನೀಡಲಾಗಿತ್ತು; ಎಷ್ಟು ಅನುದಾನಕ್ಕೆ ಅನುಮೋದನೆ ನೀಡಲಾಗಿತ್ತು (ವಿವರ ನೀಡುವುದು);

ಇ) ಹುಕ್ಕೇರಿ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯ ಕಾಮಗಾರಿಗೆ 201920ನೇ ಸಾಲಿನ ದರಪಟ್ಟಿ ಪ್ರಕಾರ ರೂ.66.85 ಕೋಟಿ ಮೊತ್ತದ ಪರಿಷ್ಕೃತ ಅಂದಾಜು ತಯಾರಿಸಿ, ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪರಿಷ್ಕೃತ ಅಂದಾಜಿನ ಯೋಜನೆಗೆ ಯಾವಾಗ ಅನುಮೋದನೆ ನೀಡಲಾಗುವುದು (ವಿವರ ನೀಡುವುದು);

ಈ) ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹಾಕಿಕೊಂಡ ಕಾಲಮಿತಿಯೇನು?

----

15/4/1144

**ವಸತಿ ಹಾಗೂ ನಿವೇಶನ ನಿರ್ಮಾಣ**

**1156** **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕರ್ನಾಟಕ ಗೃಹ ಮಂಡಳಿಯಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ಈವರೆಗೆ ಎಲ್ಲಿ ಎಷ್ಟು ಮನೆಗಳನ್ನು ಹಾಗೂ ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ;

ಆ) ಅವುಗಳ ಪೈಕಿ ಇಲ್ಲಿಯವರೆಗೆ ಹಂಚಿಕೆ ಮಾಡಿದ ಮನೆ ಮತ್ತು ನಿವೇಶನಗಳೆಷ್ಟು; ಇನ್ನೂ ಹಂಚಿಕೆಯಾಗಬೇಕಾಗಿರುವುದೆಷ್ಟು; ಹಂಚಿಕೆಯಾಗದೆ ಉಳಿದಿರುವುದಕ್ಕೆ ಕಾರಣಗಳೇನು;

ಇ) ಸದರಿ ಮಂಡಳಿಯಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ಹೊಸದಾಗಿ ಮನೆ ಮತ್ತು ನಿವೇಶನಗಳನ್ನು ನಿರ್ಮಾಣ ಮಾಡಲು ಯೋಜನೆಗಳನ್ನು ರೂಪಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ; ಇಲ್ಲವಾದಲ್ಲಿ, ಯಾವಾಗ ಈ ಕುರಿತು ಯೋಜನೆ ರೂಪಿಸಲಾಗುವುದು?

----

15/4/1145

## ಪಡಿತರ ವಿತರಣೆ

**1157 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿರುವ ಪಡಿತರ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;
ಆ) ರಾಜ್ಯದಲ್ಲಿರುವ ಪಡಿತರದಾರರನ್ನು ಆಧಾರ ಸಂಖ್ಯೆಗೆ ಲಿಂಕ್ ಮಾಡಲು ಉದ್ದೇಶಿಸಲಾಗಿದೆಯೇ;
ಇ) ಹಾಗಿದ್ದಲ್ಲಿ, ಇದಕ್ಕಾಗಿ ಅನುಸರಿಸುತ್ತಿರುವ ಮಾನದಂಡಗಳೇನು (ವಿವರ ನೀಡುವುದು);
ಈ) ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿಗಳೆಷ್ಟು ಮತ್ತು ಪಡಿತರದಾರರೆಷ್ಟು;
ಉ) ಈ ಪೈಕಿ ಈಗಾಗಲೇ ಆಧಾರ ಸಂಖ್ಯೆಗೆ ಲಿಂಕ್ ಆಗಿರುವ ಪಡಿತರ ಚೀಟಿಗಳೆಷ್ಟು; ಇಲ್ಲಿಯವರೆಗೂ ಎಷ್ಟು ಪಡಿತರದಾರರನ್ನು ಲಿಂಕ್ ಮಾಡಲಾಗಿದೆ;
ಊ) ಬಾಕಿ ಉಳಿದಿರುವ ಪಡಿತರದಾರರನ್ನು ಆಧಾರ ಸಂಖ್ಯೆಗೆ ಲಿಂಕ್ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

----

15/4/1337

## ಜಿ+2 ಮಾದರಿ ವಸತಿ ನಿರ್ಮಾಣ

**1158 ಟಿ. ವೆಂಕಟರಮಣಯ್ಯ (ಅಪ್ಪ ಕರನಹಳ್ಳಿ ಟಿ.ವೆಂಕಟೇಶ್) (ದೊಡ್ಡಬಳ್ಳಾಪುರ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ದೊಡ್ಡಬಳ್ಳಾಪುರ ನಗರ ಸಭೆಯ 31 ವಾರ್ಡ್‌ಗಳಲ್ಲಿ 2ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಬಡತನದ ರೇಖೆಯಲ್ಲಿರುವ ಸಾರ್ವಜನಿಕರಿಗೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ನಿವೇಶನ ಮತ್ತು ವಸತಿ ರಹಿತರಿಗೆ ಜಿ+2 ಮಾದರಿ ವಸತಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

----

15/4/1338

## ಕಾವೇರಿ ನೀರು ಸರಬರಾಜು

**1159 ಟಿ. ವೆಂಕಟರಮಣಯ್ಯ (ಅಪ್ಪ ಕರನಹಳ್ಳಿ ಟಿ.ವೆಂಕಟೇಶ್) (ದೊಡ್ಡಬಳ್ಳಾಪುರ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಈಗಾಗಲೇ ಕಾವೇರಿ ನೀರು ಸಂಪರ್ಕವಿದ್ದು, ಕೈಗಾರಿಕಾ ಪ್ರದೇಶಕ್ಕೆ ಸಮೀಪದಲ್ಲಿರುವ ದೊಡ್ಡಬಳ್ಳಾಪುರ ನಗರಸಭೆಯ 31 ವಾರ್ಡ್‌ಗಳಲ್ಲಿ 2 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ನಾಗರಿಕರಿಗೆ ಕಾವೇರಿ ನೀರು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

----

15/4/1448

**ಅನಿಲ ಭಾಗ್ಯ ಯೋಜನೆ**

1160 **ಯತೀಂದ್ರ ಎಸ್. (ವರುಣ):**

ಮಾನ್ಯ **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ಬಡಜನರಿಗೆ ಎಲ್.ಪಿ.ಜಿ ಸಂಪರ್ಕವನ್ನು ಕಲ್ಪಿಸುವ ಉದ್ದೇಶದಿಂದ ತಂದಿರುವ ಮುಖ್ಯಮಂತ್ರಿಗಳ ಅನಿಲ ಭಾಗ್ಯ ಯೋಜನೆಯು ಸರಿಯಾಗಿ ಅನುಷ್ಠಾನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;
ಇ) ಈ ಯೋಜನೆಗೆ ವರುಣ ಕ್ಷೇತ್ರದಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಲಾಗಿದೆ; ಎಷ್ಟು ಫಲಾನುಭವಿಗಳಿಗೆ ಅನಿಲ ಭಾಗ್ಯ ಯೋಜನೆಯನ್ನು ಕಲ್ಪಿಸಲಾಗಿದೆ; ಬಾಕಿ ಇರುವ ಫಲಾನುಭವಿಗಳಿಗೆ ಯಾವಾಗ ಈ ಸೌಲಭ್ಯವನ್ನು ಕಲ್ಪಿಸಲಾಗುವುದು? (ಮಾಹಿತಿ ನೀಡುವುದು)

----

15/4/1449

**ಒಳಚರಂಡಿ ಕಾಮಗಾರಿ**

1161 **ಯತೀಂದ್ರ ಎಸ್. (ವರುಣ):**

ಮಾನ್ಯ **ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ನಾಗರಿಕರ ಅನುಕೂಲಕ್ಕೆ ಕೈಗೊಂಡಿರುವ ಒಳಚರಂಡಿ ಕಾಮಗಾರಿಯನ್ನು ಪೂರ್ವಕವಾಗಿ ಕೈಗೊಳ್ಳದೆ, ಎಸ್.ಟಿ.ಪಿ ಟ್ಯಾಂಕ್ ನಿರ್ಮಿಸದೆ ನೀರು ಅಲ್ಲಲ್ಲಿಯೇ ನಿಂತು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;
ಇ) ವರುಣ ಕ್ಷೇತ್ರ ವ್ಯಾಪ್ತಿಯ ಟಿ.ನರಸೀಪುರ ಪುರಸಭೆಯಲ್ಲಿ ಒಳಚರಂಡಿ ಕಾಮಗಾರಿ ಸಮರ್ಪಕವಾಗಿ ಕೈಗೊಳ್ಳದ ಕಾರಣ ನಾಗರಿಕರಿಗೆ ತೊಂದರೆಯಾಗಿದ್ದು ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ ಸಹ ಕ್ರಮ ವಹಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು)

----

15/4/1450

**ಮನೆಗಳ ಫಲಾನುಭವಿಗಳು**

1162 **ಯತೀಂದ್ರ ಎಸ್. (ವರುಣ):**

ಮಾನ್ಯ **ವಸತಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ವಸತಿ ಇಲಾಖೆಯ ವಿವಿಧ ನಿಗಮಗಳ ಮೂಲಕ ಬಡಜನರಿಗೆ ವಿವಿಧ ಯೋಜನೆಗಳಲ್ಲಿ ಮನೆಗಳನ್ನು ನಿರ್ಮಿಸುತ್ತಿದ್ದು ಹಲವಾರು ಗ್ರಾಮಗಳಲ್ಲಿ ನಿವೇಶನಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು)

ಇ) ವರುಣ ಕ್ಷೇತ್ರದಲ್ಲಿ ಎಷ್ಟು ವಸತಿ ರಹಿತ ಫಲಾನುಭವಿಗಳನ್ನು ಗುರುತಿಸಲಾಗಿದೆ; ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ;

ಈ) ಬಾಕಿ ಫಲಾನುಭವಿಗಳಿಗೆ ಯಾವಾಗ ಮಂಜೂರು ಮಾಡಲಾಗುವುದು; (ಮಾಹಿತಿ ನೀಡುವುದು)

ಉ) ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರಹಿತರಿಗೆ ಜಾಗದ ಸಮಸ್ಯೆಯಿಂದ ನಿವೇಶನ ಹಂಚಿಕೆ ಸಾಧ್ಯವಾಗುತ್ತಿಲ್ಲವಾದ್ದರಿಂದ, ಬದಲಿಯಾಗಿ ಗ್ರಾಮ ಮಟ್ಟದಲ್ಲಿ ಅಥವಾ ಹೋಬಳಿ ಮಟ್ಟದಲ್ಲಿ ಗುಂಪು ಮನೆಗಳನ್ನು ನಿರ್ಮಿಸಲಾಗುವುದೇ? (ಮಾಹಿತಿ ನೀಡುವುದು)

----

**ಬೆಂಗಳೂರು - 560001.** | **ಎಂ.ಕೆ. ವಿಶಾಲಾಕ್ಷಿ,**

**ಬುಧವಾರ, 24ನೇ ಜುಲೈ, 2019.** | **ಕಾರ್ಯದರ್ಶಿ (ಪ್ರ)**